# ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯ್ತಿ
ಮೈಸೂರು

ಸಾರ್ವಜನಿಕ ಶಿಕ್ಷಣ ಇಲಾಖೆ
ಮೈಸೂರು

ಇವರ ಆಶಯದೊಂದಿಗೆ

## ಕ್ಷೇತ್ರ ಶಿಕ್ಷಣಾಧಿಕಾರಿಯವರ ಕಾರ್ಯಾಲಯ
## ಸಾರ್ವಜನಿಕ ಶಿಕ್ಷಣ ಇಲಾಖೆ ಕೆ ಆರ್ ನಗರ

ಇ□ರ□ನ□ತ್ವತದ□□

**ಎಸ್ ಎಸ್ ಎಲ್ ಸಿ ಫಲಿತಾಂಶ ಸುಧಾರಣೆಗೆ**
**ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ**

# ಶಿಕ್ಷಕರ ಕೈಪಿಡಿ

BLOCK EDN OFFCKRN

ವಿಷಯ :- ಸಮಾಜ ವಿಜ್ಞಾನ

# 4 ಅಂಕಗಳ ಪ್ರಶ್ನೆಗಳು.

## ಅಸಹಕಾರ ಚಳುವಳಿ:–

- **ಅಸಹಾಕಾರ ಚಳುವಳಿಯಲ್ಲಿ ಗಾಂಧೀಜಿಯರ ಪಾತ್ರವೇನು.**

* ಗಾಂಧೀಜಿಯವರು1920 ನಾಗ್ಪುರ ಕಾಂಗ್ರೆಸ್ ಅಧಿವೇಶದ ನಿರ್ಣಯದಂತೆ ಬ್ರಿಟಿಷರ ವಿರುದ್ದ ಅಸಹಾಕಾರ ಚಳುವಳಿಗೆ ಕರೆಯಿತ್ತರು.
* ಗಾಂಧೀಜಿಯವರ ಕರೆಯನ್ನು ಬೆಂಬಲಿಸಿ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
* ಭಾರತೀಯ ಗಣ್ಯರು ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಹಿಂದಿರುಗಿಸಿದರು.
* ಈ ಚಳುವಳಿಯನ್ನು ಬೆಂಬಲಿಸಿ ಮೋತಿಲಾಲ್ ನೆಹರು, ಸಿ.ಆರ್.ದಾಸ್ ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿದರು.
* ಈ ಅವಧಿಯಲ್ಲಿ ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಿ ದೇಶಾದ್ಯಂತ ಹರತಾಳವನ್ನು ಅಚರಿಸಲಾಯಿತು.
* ಅಸಹಕಾರ ಚಳುವಳಿಯ ಸ್ವರೂಪವನ್ನು ಮನಗಂಡ ಬ್ರಿಟಿಷ್ ಸರ್ಕಾರದಲ್ಲಿ ಅತಂಕದ ವಾತಾವರಣ ಉಂಟಾಯಿತು.
* 1922 ರಲ್ಲಿ ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಅಸಹಕಾರ ಚಳುವಳಿ ಹಿಂಸಾರೂಪ ತಾಳಿತು.
* ಈ ಘಟನೆಯಿಂದ ಮನನೊಂದು ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂಪಡೆದರು.
* ಸರ್ಕಾರ ಈ ಹಿಂಸೆಗೆ ಗಾಂಧೀಜಿಯವರನ್ನು ಹೊಣೆಗಾರರನ್ನಾಗಿ ಮಾಡಿ ಅವರಿಗೆ 6 ವರ್ಷಗಳ ಕಾಲ ಸೆರೆವಾಸದ ಶಿಕ್ಷೆ ವಿಧಿಸಿತು.

- **ನೆಹರುರವರು ಪ್ರಧಾನ ಮಂತ್ರಿಯಾದ ನಂತರ ದೇಶಕ್ಕೆ ನೀಡಿದ ಕೊಡುಗೆಗಳೇನು?**

* ದೇಶೀ ಸಂಸ್ಥಾನಗಳ ವಿಲೀನಕ್ಕೆ ಕಾರಣರಾದರು.
* ಭಾಷಾವಾರು ಪ್ರಾಂತ್ಯಗಳ ರಚನೆ.
* ಮಿಶ್ರ ಆರ್ಥಿಕ ನೀತಿ.
* ಬೃಹತ್ ಕೈಗಾರಿಕರಣ.
* ಪಂಚವಾರ್ಷಿಕ ಯೋಜನೆ.
* ಆಲಿಪ್ತ ನೀತಿ ಪರಿಪಾದನೆ.
* ಪಂಚಶೀಲ ತತ್ವ.
* ಶಾಂತಿ ಸಹಬಾಳ್ವೆ ಸೂತ್ರ.

- **ಸ್ವಾತಂತ್ರ ಹೋರಾಟದಲ್ಲಿ ಸುಬಾಷ್ ಚಂದ್ರ ಬೋಸ್ ರ ಸಾಧನೆ ವಿವರಿಸಿ.**

* ವಿದೇಶದಲ್ಲಿರುವ ಭಾರತಿಯರನ್ನು ಸಂಘಟಿಸಿ ಬ್ರಿಟಿಷ್ರ ವಿರುದ್ದ ಹೋರಾಡಿದರು.
* ನೆಹರುರವರ ಜೊತೆಗೂಡಿ ಸಮಾಜವಾದಿ ಪಕ್ಷ ಸ್ಥಾಪಿಸಿದರು.
* ಫಾರ್ವಡ್ ಬ್ಲಾಕ್ ಪಕ್ಷ ಕಟ್ಟಿದರು.
* ಬ್ರೀಟಿಷರು ಸುಭಾಷರನ್ನು ಗೃಹಬಂಧನದಲ್ಲಿ ಇಟ್ಟಾಗ ಅಲ್ಲಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು.
* ಭಾರತದ ಸ್ವಾತಂತ್ರಕ್ಕಾಗಿ ಹಿಟ್ಲರ್ ಮತ್ತು ಮುಸುಲೋನಿಯ ಸಹಾಯ ಕೇಳಿದರು
* ಆಜಾದ್ ಹಿಂದ್ ರೇಡಿಯೋ ಮೂಲಕ ತಮ್ಮ ಭಾಷಣವನ್ನು ಭಾರತೀಯರಿಗೆ ಪ್ರಸರಣ ಮಾಡಿದರು.
* ಭಾರತೀಯ ರಾಷ್ಟ್ರೀಯ ಸೇನೆ ಸ್ಥಾಪಿಸಿದರು.
* ದೆಹಲಿ ಚಲೋಗೆ ಕರೆ ನೀಡಿದರು.

- **ಸ್ವಾತಂತ್ರ ಹೋರಾಟದಲ್ಲಿ ಗಾಂಧಿಜಿಯವರ ಪಾತ್ರ ವಿವರಿಸಿ.**

* ತಮ್ಮ ಹೋರಾಟದಲ್ಲಿ ಅಹಿಂಸಾ ತಂತ್ರ ಬಳಸಿದರು.
* ಸತ್ಯಾಗ್ರಹ ಇವರ ಹೋರಾಟದ ಪ್ರಮುಖ ಅಸ್ತ್ರ.
* 1919ರ ರೌಲತ್ ಕಾಯಿದೆ ವಿರೋಧಿಸಿದರು.
* 1920ರಲ್ಲಿ ಅಸಹಕಾರ ಚಳುವಳಿಗೆ ಕರೆ ನೀಡಿದರು.
* ಚೌರಿ ಚೌರ ಘಟನೆಯಂದ ಬೇಸತ್ತು ಅಸಹಕಾರ ಚಳುವಳಿ ಹಿಂತೆಗೆದು ಕೊಂಡರು. * 1930 ರಲ್ಲಿ ದಂಡಿ ಸತ್ಯಾಗ್ರಹ ನಡೆಸಿದರು.
* 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ನಾಯಕತ್ವ ವಹಿಸಿದರು.
* ಜನತೆಗೆ ಮಾಡು ಇಲ್ಲವೆ ಮಡಿ ಕರೆ ನೀಡಿದರು.

BLOCK EDN OFFC KRN

- **ಸಾಮಾಜಿಕ ಸಮಾನತೆ ಕಾಪಾಡುವಲ್ಲಿ ಅಂಬೇಡ್ಕರ್‌ರವರ ಕೊಡುಗೆಯನ್ನು ತಿಳಿಸಿ?**

  * ಸಾಮಾಜಿಕ ಸ್ವಾತಂತ್ರ್ಯ ಇಲ್ಲದ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ ಎಂದರು.
  * ಜಾತಿ ವ್ಯವಸ್ಥೆ ಅಧ್ಯಯನ ನಡೆಸಿದರು.
  * ಮಹದ್ ಮತ್ತು ಕಾಲಾರಾಂ ದೇವಾಲಯ ಚಳುವಳಿ ರೂಪಿಸಿದರು.
  * ಅಸ್ಪೃಶ್ಯರಿಗಾಗಿ ಪ್ರತ್ಯೇಕ ಮತಕ್ಷೇತ್ರ ಬಯಸಿದರು.
  * ಬಹಿಷ್ಕೃತ ಹಿತಕಾರಣಿ ಸಭಾ ಸಂಘಟಿಸಿದರು.
  * ಸ್ವತಂತ್ರ ಕಾರ್ಮಿಕ ಪಕ್ಷ ಸ್ಥಾಪಿಸಿದರು.
  * ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
  * ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾಗಿದ್ದರು.

- **ಸ್ವಾತಂತ್ರ ಹೋರಾಟದಲ್ಲಿ ರೈತರು, ಕಾರ್ಮಿಕರು ಮತ್ತು ಬುಡಕಟ್ಟು ಬಂಡಾಯಗಳನ್ನು ವಿವರಿಸಿ.**

  * ತೆಲಂಗಾಣದಲ್ಲಿ ಜಮೀನ್ದಾರರು ಮತ್ತು ರಜಾಕರರ ವಿರುದ್ದ ರೈತರ ಹೋರಾಟ.
  * ಬಂಗಾಳದಲ್ಲಿ ಜಮೀದ್ದಾರರ ವಿರುದ್ದ ರೈತರ ಹೋರಾಟ.
  * ಮಹಾರಷ್ಟ್ರದಲ್ಲಿ ರೈತರ ಕಡಿಮೆ ಕೂಲಿಯ ವಿರುದ್ದ ಚಳುವಳಿ.
  * ಹೆಚ್ಚಿನ ಕೂಲಿಗಾಗಿ ಬ್ರಿಟಿಷರ ವಿರುದ್ದ ರೈಲ್ವೆ ಕೂಲಿಗಳ ಚಳುವಳಿ.
  * ಕಲ್ಕತ್ತದಲ್ಲಿ ಪ್ರಿಂಟರ್ಸ್ ಯೂನಿಯನ್ ಚಳುವಳಿ.
  * ಬಾಂಬೆ ಬಟ್ಟೆ ಗಿರಣಿ ಕಾರ್ಮಿಕರ ಹೋರಾಟ.
  * ಹಲಗಲಿಯ ಬೇಡರ ಬಂಡಾಯ.
  * ಸಂತಾಲ ಬುಡಕಟ್ಟು ದಂಗೆ.
  * ಮುಂಡ ಚಳುವಳಿ.

- **ಭಾರತೀಯ ಸ್ವಾತಂತ್ರ ಚಳುವಳಿಯ ಸಂದರ್ಭದಲ್ಲಿ ಅಸಹಾಕಾರ ಚಳುವಳಿಯ ಕಾರ್ಯಕ್ರಮವನ್ನು ವಿವರಿಸಿ?**

  * ಚಿತ್ತರಂಜನ್ ದಾಸ್ ನೆಹರು, ರಾಜೇಂದ್ರ ಪ್ರಸಾದ್ ತಮ್ಮ ವಕೀಲ ವೃತ್ತಿ ತ್ಯಜಿಸಿದರು.
  * ವಿದ್ಯಾರ್ಥಿಗಳಿಂದ ಶಾಲಾ ಕಾಲೇಜು ಬಹಿಷ್ಕಾರ.
  * 1919ರ ಕಾಯ್ದೆ ಅಡಿಯಲ್ಲಿ ಪ್ರಾಂತ್ಯಗಳಿಗೆ ನಡೆದ ಚುನಾಣೆಯನ್ನು ಕಾಂಗ್ರೇಸ್ ನಿಂದ ಬಹಿಷ್ಕಾರ.
  * ರಾಷ್ಟ್ರೀಯ ವಿದ್ಯಾಲಯಗಳ ಸ್ಥಾಪನೆ.

  * ರವೀದ್ರನಾಥ್ ಠಾಗೂರ್ ಬ್ರಿಟಿಷರ ನೀಡಿದ ನೈಟ್ ಹುಡ್ ಪದವಿಯನ್ನು ಸರ್ಕಾರಕ್ಕೆ ಹಿಂದಿರುಗಿಸಿದರು.
  * ಜನಸಾಮಾನ್ಯರು ಕಾಂಗ್ರೆಸ್ ಹೋರಾಟಕ್ಕೆ ಧೇಣಿಗೆ ನೀಡಿದರು.
  * ವಿದೇಶ ವಸ್ತುಗಳ ಬಹಿಷ್ಕಾರ.
  * 1921 ಪ್ರಿನ್ಸ್ ಆಫ್ ವೇಲ್ಸ್ ರಾಜಕುಮಾರ ಬರುವ ಕಾರ್ಯಕ್ರಮಕ್ಕೆ ವಿರೋಧ.

- **ಸವಿನಯ ಕಾನೂನು ಭಂಗ ಅಥವಾ ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ.**

  * ಗಾಂಧೀಜಿಯವರು 1930 ರಂದು 11 ಅಂಶಗಳ ಬೇಡಿಕೆಯನ್ನು ವ್ಯಸರಾಯ್ ಮುಂದೆ ಇಟ್ಟರು
  * ಸರ್ಕಾರ ಇದಕ್ಕೆ ತಪ್ಪದಲ್ಲಿ ಕಾನೂನು ಭಂಗ ಚಳುವಳಿ ಆರಂಬಿಸುದಾಗಿ ಘೋಷಿಸಿದರು.
  * ವೈಸರಾಯ್ ಈ ಪತ್ರವನ್ನು ತಿರಸ್ಕರಿಸಿದ ಕಾರಣ ಗಾಂಧೀಜಿಯವರು ಸಬರಮತಿ ಆಶ್ರಮದಿಂದ ದಂಡಿಯವರೆಗೆ 375 ಕಿ.ಮೀ ದೂರ ಕ್ರಮಿಸಿದರು.
  * ಎಪ್ರಿಲ್ 6 ರಂದು ದಂಡಿ ತಲುಪಿಉಪ್ಪನ್ನು ತಯಾರಿಸುವ ಮೂಲಕ ಉಪ್ಪಿನ ಕಾನೂನು ಮುರಿದರು.
  * ಚರಕ ಈ ಚಳುವಳಿಯಲ್ಲಿ ಬಹಳ ಪ್ರಸಿದ್ದವಾಯಿತು.
  * ಗಾಂಧೀಜಿಯ ಕರೆಗೆ ಸಾವಿರಾರು ಜನ ಸ್ಪಂದಿಸಿದರು.
  * ಉಪ್ಪಿನ ಸತ್ಯಾಗ್ರಹದ ನಂತರ ಎಪ್ರಿಲ್ 6 ರಿಂದ13 ರವರೆಗೆ ರಾಷ್ಟ್ರೀಯ ಚಳುವಳಿ ಸಪ್ತಾಹ ಅಚರಿಸಿದರು.
  * ಈ ಚಳುವಳಿಯಲ್ಲಿ ಗಾಂಧೀಜಿಯೊಂದಿಗೆ ಭಗವಹಿಸಿದ ವಿಜಯಲಕ್ಷ್ಮಿ ಪಂಡಿತ್, ಕಮಲಾ ನೆಹರು, ಪಟೇಲ್ ಮುಂತಾದವರನ್ನು ಬ್ರಿಟೀಷರು ಬಂದಿಸಿದರು.

BLOCK EDN OFFC KRN

# ಮೂರು ಅಂಕದ ಪ್ರಶ್ನೆಗಳು,

## ಬ್ರಿಟೀಷ್ ಆಳ್ವಿಕೆಯ ಪರಿಣಾಮಗಳು,

ಬ್ರಿಟೀಷ್ ಆಳ್ವಿಕೆಯ ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆಯ ಕುರಿತು ವಿವರಿಸಿ.

- ನಾಗರಿಕ ಸೇವಾ ವ್ಯವಸ್ಥೆ :– * ಲಾರ್ಡ್ ಕಾರನ್ ವಾಲಿಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಜಾರಿಗೆ ತಂದನು
  * ನಾಗರಿಕ ಸೇವಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಗುವಂತಾಯಿತು.
- ನ್ಯಾಯಂಗ ವ್ಯವಸ್ಥೆ :– * ಬಂಗಾಳದಲ್ಲಿ ದ್ವಿಸರ್ಕಾರ ಜಾರಿಗೆ ಬಂದಿತು.
  * ಕಂದಾಯ ವಸೂಲಿ ಹಕ್ಕು ಬ್ರಿಟೀಷರಿಗು, ನಾಗರಿಕ ಮತ್ತು ಅಪರಾದ ನ್ಯಾಯ ನಿರ್ವಹಣಾ ಹಕ್ಕನ್ನು ಭಾರತೀಯರಿಗು ನೀಡಲಾಯಿತು
  * ವಾರನ್ ಹೇಸ್ಟಿಂಗ್ಸ್‌ನು ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯ, ಫೌಜುದಾರಿ ಅದಾಲತ್ ಎಂಬ ಅಪರಾದ ನ್ಯಾಯಾಲಯ ಪ್ರಾರಂಬಿಸಿದನು.
- ಪೋಲಿಸ್ ವ್ಯವಸ್ಥೆ :– * ಸೂಪರಿಟೆಂಡೆಂಟ್ ಆಫ್ ಪೋಲಿಸ್ ಎಂಬ ಹೊಸ ಹುದ್ದೆಗಳ ಸೃಷ್ಟಿ
  * ಠಾಣಾ ಹಂತದಲ್ಲಿ ಕೊತ್ವಾಲರ ನೇಮಕ, ಹಳ್ಳಿಗಳಲ್ಲಿ ಚೌಕಿದಾರರ ನೇಮಕ.
- ಸೇನಾ ವ್ಯವಸ್ಥೆ :– * ಭಾರತೀಯ ಕೂಲಿ ಸೈನಿಕರನ್ನು ಒಳಗೊಂಡ ಸೈನ್ಯಶಕ್ತಿ ಇತ್ತು.

- ಬ್ರಿಟೀಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳಾವುವು/ಪರಿಣಾಮಗಳೇನು?
  * ವಾರನ್ ಹೇಸ್ಟಿಂಗ್ಸ್ ಇಂದ ಅದುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ.
  * ಕಲ್ಕತ್ತಾ ಮದರಸಾ ಪ್ರಾರಂಭ
  * ಜೊನಾಥನ್ ಡಂಕನ್ ಬ್ರಟೀಷ್ ವ್ಯಕ್ತಿಯಿಂದ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜು ಪ್ರಾರಂಭ.
  * ಗೌವರ್ನರ್ ಜನರಲ್ ವಿಲಿಯಂ ಬೆಂಟಿಂಕನಿಂದ ಬ್ರಿಟೀಷ್ ಶಿಕ್ಷಣದ ವಿಸ್ತರಣೆಗೆ ವಿಶೇಷ ಪೋತ್ಸಾಹ.
  * ಮೇಕಾಲೆಯ ವರದಿಯೇ ಆಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿ.
  * ಲಾಡ್ ಡಾಲ್ ಹೌಸಿಯು ಕಲ್ಕತ್ತ ಬಾಂಬೆ ಮದರಾಸಗಳಲ್ಲಿ ನೂತನ ವಿಶ್ವ ವಿದ್ಯಾನಿಲಯಗಳನ್ನು ಸ್ಥಾಫಿಸಿದನು.
- ಭಾರತದ ಸಂವಿದಾನಾತ್ಮಕ ಬೆಳವಣಿಗೆಗೆ ಸಹಕಾರಿಯಾದ ಕಾಯ್ದೆಗಳನ್ನು ವಿವರಿಸಿ.
  * 1773 ರ ರೆಗ್ಯುಲೇಟಿಂಗ್ ಕಾಯ್ದೆ.
  * 1858 ರ ಭಾರತ ಸರ್ಕಾರದ ಕಾಯ್ದೆ.
  * 1919 ರ ಭಾರತ ಸರ್ಕಾರದ ಕಾಯ್ದೆ.
  * 1935 ರ ಭಾರತ ಸರ್ಕಾರದ ಕಾಯ್ದೆ.

*1773 ರ ರೆಗ್ಯುಲೇಟಿಂಗ್ ಕಾಯ್ದೆ.:–1. ಬಂಗಾಳದ ಪ್ರಸಿಡೆನ್ಸಿಯು ಉಳಿದ ಮುಂಬಯಿ ಮತ್ತು ಮದ್ರಾಸ್ ಪ್ರಸಿಡೆನ್ಸಿಗಳ ಮೇಲೆ ಅಧಿಕಾರ ಪಡೆಯಿತು.
2. ಬಂಗಾಳದ ಗೌವರ್ನರನು ಮೂರು ಪ್ರಸಿಡೆನ್ಸಿಗಳಿಗೆ ಗೌವರ್ನರ್ ಜನರಲ್ ಆದನು.
3. ಬಂಗಾಳ ಸರ್ಕಾರ ಮತ್ತು ನಿರ್ದೇಶಕರ ಮಂಡಳಿಯ ಅನುಮತಿ ಇಲ್ಲದೆ ಬಾಂಬೆ ಮತ್ತು ಮದ್ರಾಸ ಸರ್ಕಾರಗಳು ಯುದ್ದ ಮತ್ತು ಶಾಂತಿ ಸಂಧಾನ ಮಾಡುವಂತಿಲ್ಲ.
4. ಕಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆ.

* 1858 ರ ಭಾರತ ಸರ್ಕಾರದ ಕಾಯ್ದೆ:– 1. ಈಸ್ಟ್ ಇಂಡಿಯ ಕಂಪನಿಯ ಮಾನ್ಯತೆ ರದ್ದು.
2. ಭಾರತವು ಬ್ರಿಟೀಷ್ ರಾಣಿಯ ಆಡಳಿತಕ್ಕೆ ವಶ.
3. ಗೌರರ್ನರ್ ಜನರಲ್ ಹುದ್ದೆಗೆ ಬದಲಾಗಿ ವೈಸ್‌ರಾಯ್ ಎಂಬ ಪದನಾಮ.

BLOCK EDN OFFCKRN

4. ಸೆಕ್ರಟರಿಆಫ್ ಸ್ಟೇಟ್ ಫಾರ್ ಇಂಡಿಯಾ ಎಂಬ ಸ್ಥಾನದ ಸೃಷ್ಟಿ.
5. 15 ಸದಸ್ಯರನೋಳಗೊಂಡ ಕೌನ್ಸಿಲ್ ಆಫ್ ಇಂಡಿಯಾ ಅಸ್ತಿತ್ವಕ್ಕೆ ಬಂದಿತು.

* 1919 ರ ಭಾರತ ಸರ್ಕಾರದ ಕಾಯ್ದೆ.:–1. ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆ.
2.ಪ್ರಾಂತ್ಯಗಳಲ್ಲಿ ದ್ವಿ ಸರ್ಕಾರ ಪದ್ಧತಿ.
3.ಭಾರತಕ್ಕೆ ಒಬ್ಬ ಹೈ ಕಮಿಷನರ್ ನೇಮಕ.
4. ಸ್ವಯಂ ಆಡಳಿತವುಳ್ಳ ಸ್ಥಳಿಯ ಸಂಸ್ಥೆಗಳ ಅಭಿವೃದ್ಧಿ.
5.ಪ್ರತ್ಯೇಕ ಚುನಾವಣಾ ಮತಗಟ್ಟೆ.

*1935 ರ ಭಾರತ ಸರ್ಕಾರದ ಕಾಯ್ದೆ:–1. ಬ್ರಿಟೀಷ್ ಪ್ರಾಂತ್ಯಗಳು ದೇಶಿಯ ಸಂಸ್ಥಾನಗಳು ಹಾಗೂ ಆಶ್ರಿತ ರಾಜರನ್ನೊಳಗೊಂಡ ಅಖಿಲ ಭಾರತದ ರಚನೆ.
2. ಕೇಂದ್ರದಲ್ಲಿ ದ್ವಿ ಸರ್ಕಾರ ಪದ್ಧತಿಗೆ ಅವಕಾಶ.
3. ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ.
4. ಭಾರತದಲ್ಲಿ ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ.
5. ಪ್ರಾಂತ್ಯದಲ್ಲಿ ದ್ವಿ ಸರ್ಕಾರ ಪದ್ಧತಿ ರದ್ದು.

## ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು,

- ಕರ್ನಾಟಕದ ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಮತ್ತು ಹಲಗಲಿಯ ಬೇಡರ ದಂಗೆಯನ್ನು ವಿವರಿಸಿ.

01)ಕಿತ್ತೂರು ರಾಣಿಚನ್ನಮ್ಮ :– * ಟಿಪ್ಪು ಮತ್ತು ಮರಾಠರ ಪ್ರತಿರೋಧದ ನಂತರ ಅಧಿಕಾರ ಕ್ರೋಢೀಕರಣಕಾಗಿ ಬ್ರಿಟಿಷರು ಕಾನೂನುಗಳನ್ನು ಜಾರಿಗೆ ತಂದರು.
* "ದತ್ತು ಮಕ್ಕಳಿಗೆ ಹಕ್ಕಿಲ್ಲ" ರಾಣಿಯ ಬಂಡಾಯಕ್ಕೆ ಕಾರಣವಾಯಿತು.
* ಶಿವಲಿಂಗರುದ್ರ ಸರ್ಜನ ಮರಣದ ನಂತರ ಶಿವಲಿಂಗಪ್ಪ ಎಂಬ ಹುಡುಗನನ್ನು ಚನ್ನಮ್ಮ ದತ್ತು ಪಡೆದು ಆಡಳಿತ ನಿರ್ವಹಿಸಿದಳು.
* ಥ್ಯಾಕರೆಯ ಪ್ರಯತ್ನಗಳನ್ನು ವಿಫಲ ಗೊಳಿಸಲು ಯುದ್ಧ ಅನಿವಾರ್ಯವೆಂದು ಸಾರಿದಳು.

02) ಹಲಗಲಿಯ ಬೇಡರು :– * ಬಾಗಲಕೋಟೆ ಜಿಲ್ಲೆ ಮುದೋಳ ತಾಲ್ಲೂಕಿನಲ್ಲಿ ಹಲ'ಗಲಿ ಒಂದು ಪುಟ್ಟ ಗ್ರಾಮ.
* ಈ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂದಿಸಿ ಬ್ರಿಟೀಷರು ಕಾನೂನುಗಳನ ಜಾರಿಗೆ ತಂದರು
* ಹಲಗಲಿಯ ಬೇಡರು ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲ್ಲಿಲ್ಲ. ಅದಕ್ಕಾಗಿ ಸಿಡಿದ್ದೆದರು.
* ಬ್ರಿಟಿಷರು ಬೇಡರ ಬಂಡಾಯವನ್ನು ಹತ್ತಿಕ್ಕಿ, ಬಂಡಾಯಕಾರರನ್ನು ಗಲ್ಲಿಗೇರಿಸುವುದರ ಮೂಲಕ ಬಂಡಾಯ ಕೊನೆಗೊಳಿಸಿದರು.

- ದೋಂಡಿಯ ವಾಘ್ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

* ಲಾರ್ಡ್ ವೆಲ್ಲೆಸ್ಲಿಯು ಅತನಿಗೆ ಅಂತ್ಯವನ್ನು ಹಾಡಲು ನಿರ್ಧರಿಸಿದನು.
* ನಿರ್ಭಿತಿಯಿಂದ ಸಂಚರಿಸುತ್ತಿದ ದೋಂಡಿಯನಾ ಸೈನ್ಯವನ್ನು ಸೋಲಿಸಲು ಬ್ರಿಟಿಷರು ಪ್ರಯತ್ನಿಸಿದರು
* ನಿಜಾಮ ಮತ್ತು ಮರಾಠರ ಸೈನ್ಯಯದ ನಡುವೆ ದೋಂಡಿಯನ ಸೈನ್ಯ ಸಿಲುಕಿ ಕೋನ್'ಗಲ್ ಎಂಬ ಸ್ಥಳದಲ್ಲಿ ಅತನ ಹತ್ಯೆ ಮಡಲಯಿತು.
* ಬ್ರಿಟಿಷರು ಬಂಡು ಕೋರರಿಂದ ಅಪಾರ ಪ್ರಮಾಣದ ಮದ್ದು ಗುಂಡುಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು.

BLOCKED OFFC KRN

# ಭಾರತದ ಸಮಸ್ಯೆಗಳು ಮತ್ತು ಪರಿಹಾರೋಪಯಗಳು.

- ಭಾರತವು ಪ್ರಸ್ಥುತ ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿಸಿ.
  * ನಿರುದ್ಯೋಗ.
  * ಭ್ರಷ್ಟಾಚಾರ.
  * ಲಿಂಗ ತಾರತಮ್ಯ.
  * ಕೋಮುವಾದ.
  * ಮಹಿಳೆಯರ ಸ್ಥಾನಮಾನ.
  * ಭಯೋತ್ಪಾದಕತೆ.
  * ಕಾರ್ಪೊರೇಟ್ ತಂತ್ರಗಾರಿಕೆ.
- ಕೋಮುವಾದ ದೇಶದ ಏಕತೆಗೆ ಮಾರಕ ಹೇಗೆ?
  * ಸಮಾಜದಲ್ಲಿ ಅಪನಂಬಿಕೆ& ಭಯದ ಸೃಷ್ಟಿ.
  * ಸಮಾಜದಲ್ಲಿ ಗುಂಪುಗಾರಿಕೆ & ರಾಜಕೀಯ ಪೈಪೋಟಿ.
  * ದೇಶದ ಐಕ್ಯತೆ & ಸಮಗ್ರತೆಗೆ ಧಕ್ಕೆ.
  * ಸಾಮಾಜಿಕ ನೆಮ್ಮದಿಯ ನಾಶ.
- ಕೋಮುವಾದ ತಡೆಯುವ ವಿಧಾನ
  * ಸಮಾನ ನಾಗರಿಕ ಸಂಹಿತೆ ಜಾರಿ.
  * ಎಲ್ಲಾ ರಂಗಗಳಲ್ಲಿಯೂ ಜಾತ್ಯಾತೀತ ತತ್ವಗಳಿಗೆ ಒತ್ತು.
  * ಶಿಕ್ಷಣದಲ್ಲಿ ಜಾತ್ಯತೀತ ತತ್ವದ ಅಳವಡಿಕೆ.
  * ಉತ್ತಮ ರಾಷ್ಟ್ರೀಯ ಚಿಂತನೆ ಬೆಳೆಸುವುದು.
  * ಕೋಮುವಾದ ಬೆಂಬಲಿಸುವ ವ್ಯಕ್ತಿ/ಸಂಸ್ಥೆಯನ್ನು ಶಿಕ್ಷಿಸುವುದು.
- ಮಹಿಳೆಯರ ಸ್ಥಾನಮಾನ ಸುಧಾರಣೆ.
  * ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ರಚಿಸಲಾಗಿದೆ.
  * ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಗಳ ಜಾರಿ.
  * ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಮಹಿಳಾ ಆಯೋಗಗಳನ್ನುರಚಿಸಲಾಗಿದೆ.
  * ಕರ್ನಾಟಕದಲ್ಲಿ ಗ್ರಾಮೀಣ ಮಹಿಳೆಯರ ವಿಕಾಸಕ್ಕೆಂದು ಸ್ತ್ರೀ ಶಕ್ತಿ ಕಾರ್ಯಕ್ರಮವನ್ನು ರೂಪಿಸಲಾಗಿದೆ.
  * ಕರ್ನಾಟಕ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 33ರಷ್ಟು ಮೀಸಲಾತಿಯನ್ನು ನೀಡಲಾಗಿದೆ.
- ಭಯೋತ್ಪಾದಕತೆಯ ಪರಿಣಾಮಗಳು ಮತ್ತು ನಿಗ್ರಹ ಕ್ರಮಗಳು.
  * ವ್ಯಕ್ತಿಗಳಿಗೆ ಮತ್ತು ಸ್ವತ್ತುಗಳಿಗೆ ಅಪಾರ ಹಾನಿ.
  * ಉಗ್ರಗಾಮಿತ್ವ ಮಾನಸಿಕ ವೇದನೆ ನೀಡುತ್ತದೆ.
  * ಸಾಮಾಜಿಕ ಸಂಸ್ಕೃತಿಗೆ ನಕಾರತ್ಮಕ ಪ್ರಭಾವ.
  * ಸಾವು ನೋವು ಹಾಗೂ ಭಯದ ವಾತಾವರಣ.

ನಿಗ್ರಹ ಕ್ರಮಗಳು:–

  * ಭಾರತ ತನ್ನಲ್ಲಿ ಮತ್ತು ಅನ್ಯರ ನೆಲದಲ್ಲಿ ಭಯೋತ್ಪಾದಕತೆಗೆ ತೀವ್ರ ವಿರೋಧ ದೋರಣೆ ಹೊಂದಿದೆ.
  * ನಮ್ಮ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಭಯೋತ್ಪಾದತೆಯ ನಿಗ್ರಹಕ್ಕೆ ತೀವ್ರ ಪ್ರಯತ್ನ ನಡೆಸುತ್ತಿದೆ.
  * ಬೀತಿವಾದಿಗನ್ನು ನಿಗ್ರಹಿಸಲು ವಿಶೇಷ ಪರಿಣಿತಿ ಪಡೆದ ಪಡೆಗಳನ್ನು ರಚಿಸಲಾಗುತ್ತಿದೆ.
  * ರಕ್ಷಣಾ ಪಡೆಗಳನ್ನು ಉಗ್ರಗಾಮಿಗಳ ನಿಗ್ರಹಕ್ಕೆ ಬಳಸಲಾಗುತ್ತಿದೆ.
- ಕಾರ್ಪೋರೇಟ್ ತಂತ್ರಗಾರಿಕೆ ಮತ್ತು ಅದರ ಪ್ರಸ್ತುತ ಬೆಳವಣಿಗೆಗಳೇನು?
  * ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪೆನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳನ್ನು ಕಾಪೋರೇಟ್ ತಂತ್ರಗಾರಿಕೆ ಎಂದು ಕರೆಯಲಾಗುತ್ತದೆ.
  * ಜಾಗತೀಕರಣ ಮತ್ತು ಆಧುನೀಕರಣ ತಂತ್ರಜ್ಞಾನಗಳ ಬಳಕೆಯೊಂದಿಗೆ ಬೆಳೆಯುತ್ತಿದೆ.
  * ಲಾಭದ ಉದ್ದೇಶವನ್ನು ಹೊಂದಿದೆ.
  * ನಾಗರಿಕ ಸಮಾಜದ ಅಭಿವೃದ್ದಿಗಾಗಿ,
  * ಸಾಮಾಜಿಕ ಭದ್ರತಾ ಯೋಜನೆಗಳಡಿ ಬಡತನ ನಿರ್ಮೂಲನೆ, ಉತ್ತಮ ಆರೋಗ್ಯ, ಶಿಕ್ಷಣ, ವಸತಿ, ಆಹಾರ ಇತ್ಯಾದಿ ಮೂಲ ಸೇವೆಗಳಿಗಾಗಿ ಪೂರಕವಾದ ಅಭಿವೃದ್ದಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಅವಕಾಶ ಕಲ್ಪಿಸಲಾಗುತ್ತಿದೆ.

BLOCKEDNOFFC KRN

## ದುಡಿಮೆ:–

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| ಅಧಿಕಾರವಾಹಿ ಶ್ರೇಣಿ ವ್ಯವಸ್ಥೆ | ನಿರ್ದಿಷ್ಟ ಕಾಯಿದೆ, ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡುವುದಿಲ್ಲ. |
| ವಿಶೇಷ ಪರಿಣಿತಿ ತರಬೇತಿ ಪ್ರತಿಭೆ ಅನುಭವ ಶೈಕ್ಷಣಿಕ ಅರ್ಹತೆಗಳು | ದುಡಿಮೆಗೆ ಕನಿಷ್ಠ ಕೂಲಿ ಪಡೆಯುವಿಕೆ |
| ಕೆಲಸದ ಎಲ್ಲಾ ವ್ಯವಹಾರಗಳು ಬರಹ ರೂಪದಲ್ಲಿರುತ್ತವೆ. | ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ. |
| ನಿಗಧಿತ ವೇತನ ಭತ್ಯೆ, ವಿಶ್ರಾಂತಿ ವೇತನ, ನಿವೃತ್ತಿ ವೇತನ, ವೈದ್ಯಕೀಯ ಸೌಲಭ್ಯ | ಕೆಲಸದ ಭದ್ರತೆ ಇರುವುದಿಲ್ಲ. |
| ನಿಗಧಿತ ಅವಧಿಯಲ್ಲಿ ಕಾರ್ಯನಿರ್ವಹಣೆ. | ನಿಗಧಿತ ವೇತನ, ವಿಶ್ರಾಂತಿ ವೇತನ ಮತ್ತು ನಿವೃತ್ತಿ ವೇತನ ಸೌಲಭ್ಯಗಳಿರುವುದಿಲ್ಲ. |

**ನಿರುದ್ಯೋಗ ಸಮಸ್ಯಗಳನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು:–**

- ಜನಸಂಖ್ಯಾ ನಿಯಂತ್ರಣ.
- ಗುಡಿಕೈಗಾರಿಕೆಗಳಿಗೆ ಪ್ರೋತ್ಸಾಹ.
- ಕೃಷಿ ಕ್ಷೇತ್ರದ ಅಭಿವೃದ್ಧಿ.
- ಶೈಕ್ಷಣಿಕ ಸುಧಾರಣಾ ಯೋಜನೆಗಳು
- ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ.

## ಭಾರತದ ಕೈಗಾರಿಕೆಗಳು.

- ಕೈಗಾರಿಕೆಗಳ ಸ್ಥಾನಿಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?
  - ಕಚ್ಚಾ ವಸ್ತುಗಳ ಸರಬರಾಜು.
  - ಶಕ್ತಿ ಸಂಪನ್ಮೂಲಗಳ ಪೂರೈಕೆ.
  - ಸಾರಿಗೆ ಮತ್ತು ಸಂಪರ್ಕದ ವ್ಯವಸ್ಥೆ.
  - ಮಾರುಕಟ್ಟೆ ಸೌಲಭ್ಯ.
  - ಬಂಡವಾಳ.
  - ಕಾರ್ಮಿಕರ ಮತ್ತು ನೀರು ದೊರೆಯುವಿಕೆ.
  - ಸೂಕ್ತ ವಾಯುಗುಣ.
  - ಸರ್ಕಾರದ ನೀತಿ ನಿಯಮಗಳು.
- ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ ಕುರಿತು ಬರೆಯಿರಿ.
  - ಜ್ಞಾನಾಧಾರಿತ ಕೈಗಾರಿಕೆಗಳು ಸಾಮಾಜಿಕ–ಆರ್ಥಿಕ ಬದಲಾವಣೆಯ ಪ್ರಭಾವಿತ ಸಾಧನವಾಗಿವೆ.
  - ಭಾರತವು ಪ್ರಸ್ತುತ ಹೆಚ್ಚು ಯುವ ಜನಸಂಖ್ಯೆ ಮತ್ತು ಮಾಹಿತಿ ತಂತ್ರಜ್ಞಾನ ಹೊಂದಿದ್ದು ಉತ್ತಮ ಮಾನವ ಸಾಮರ್ಥ್ಯ ಹೊಂದಿದೆ.
  - ಉಳಿದ ಎಲ್ಲಾ ಕೈಗಾರಿಕೆಗಳಿಗಿಂತಲೂ ತೀವ್ರಗತಿಯಲ್ಲಿ ಅಭಿವೃದ್ಧಿಗೊಳ್ಳುತ್ತಿರುವ ಉದ್ಯಮವಾಗಿದೆ.

BLOCK EDN OFFC KRN

## ನೈಸರ್ಗಿಕ ವಿಪತ್ತುಗಳು

- ಆವರ್ತ ಮಾರುತಗಳು ಉಂಟಾಗಲು ಕಾರಣ.

 * ಅಧಿಕ ಉಷ್ಣಾಂಶ.
 * ಪ್ರಶಾಂತ ವಾಯು.
 * ಹೆಚ್ಚು ತೇವಾಂಶಭರಿತ ವಾಯು.
 * ಕಡಿಮೆ ಒತ್ತಡದ ಪ್ರದೇಶ.

**ಪರಿಣಾಮಗಳು**

 * ವಿನಾಶಕಾರಿ
 * ಅಪಾರ ಸಾವು ಮತ್ತು ಆಸ್ತಿಹಾನಿ
 * ಕಟ್ಟಡಗಳಿಗೆ ಧಕ್ಕೆ.
 * ಸಾರಿಗೆ ಮತ್ತು ಸಂಪರ್ಕ ಅಸ್ತವ್ಯಸ್ತ
 * ವಿದ್ಯುತ್ ಸರಬರಾಜಿಗೆ ಅಡಚಣೆ
 * ಬೆಳೆ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಕುಲಕ್ಕೆ ಹಾನಿ.

- ಪ್ರವಾಹಕ್ಕೆ ಕಾರಣಗಳು.

 * ಅತ್ಯಧಿಕ ಮಳೆ
 * ಹಿಮ ಕರಗುವಿಕೆ
 * ಆವರ್ತಮಾರುತ
 * ಮೇಘಸ್ಫೋಟ
 * ನದಿಪಾತ್ರದಲ್ಲಿ ಹೂಳುತುಂಬುವಿಕೆ
 * ಅರಣ್ಯ ನಾಶ
 * ಅವೈಜ್ಞಾನಿಕ ನೀರಾವರಿ ವ್ಯವಸ್ಥೆ
 * ಒಡ್ಡು ಮತ್ತು ಅಣೇಕಟ್ಟೆಗಳು ಒಡೆದುಹೋಗುವುದು
 * ಶೀಘ್ರಗತಿಯ ನಗರೀಕರಣ

**ಪರಿಣಾಮಗಳು**

 * ವಿನಾಶಕಾರಿ
 * ಅಪಾರ ಸಾವು ಮತ್ತು ಆಸ್ತಿಹಾನಿ
 * ಕಟ್ಟಡಗಳಿಗೆ ಧಕ್ಕೆ.
 * ಸಾರಿಗೆ ಮತ್ತು ಸಂಪರ್ಕ ಅಸ್ತವ್ಯಸ್ತ
 * ವಿದ್ಯುತ್ ಸರಬರಾಜಿಗೆ ಅಡಚಣೆ
 * ಬೆಳೆ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಕುಲಕ್ಕೆ ಹಾನಿ.

**ಪ್ರವಾಹ ನಿಯಂತ್ರಣಾ ಕ್ರಮಗಳು.**

 * ಅರಣ್ಯ ಬೆಳೆಸುವುದು.
 * ವೇಗವಾದ ನೀರಿನ ಹರಿವು ನಿಯತ್ರಣ.
 * ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸುವುದು.
 * ಒಡ್ಡುಗಳ ನಿರ್ಮಾಣ.
 * ಪ್ರವಾಹಗಳ ಮುನ್ಸೂಚನೆ ನೀಡುವುದು.

**ಭೂಕುಸಿತಕ್ಕೆ ಕಾರಣಗಳು**

 * ಕಡಲ ಇಳಿಜಾರಿನ ತಳಭಾಗದ ಸವೆತ
 * ಅತ್ಯಧಿಕ ಮಳೆ
 * ಭೂಕಂಪಗಳು
 * ಅರಣ್ಯನಾಶ
 * ರೈಲು, ರಸ್ತೆ, ಅಣೆಕಟ್ಟು ಮತ್ತು ಜಲಾಶಯ ನಿರ್ಮಾಣ.
 * ಗಣಿಗಾರಿಕೆ

**ಪರಿಣಾಮಗಳು:-**

 * ವಿನಾಶಕಾರಿ

BLOCK EDN OFFC KRN

* ಅಪಾರ ಸಾವು ಮತ್ತು ಆಸ್ತಿಹಾನಿ
* ಕಟ್ಟಡಗಿಳಿಗೆ ಧಕ್ಕೆ.
* ಸಾರಿಗೆ ಮತ್ತು ಸಂಪರ್ಕ ಅಸ್ತವ್ಯಸ್ತ
* ವಿದ್ಯುತ್ ಸರಬರಾಜಿಗೆ ಅಡಚಣೆ
* ಬೆಳೆ, ಸ್ವಾಭಾವಿಕ ಸಸ್ಯವರ್ಗ ಮತ್ತು ಪ್ರಾಣಿ ಸಂಕುಲಕ್ಕೆ ಹಾನಿ.

**ನಿಯಂತ್ರಣ ಕ್ರಮಗಳು:–**

* ಇಳಿಜಾರನ್ನು ತಗ್ಗಿಸುವುದು.
* ಗಣಿಗಾರಿಕೆ ನಿಯಂತ್ರಣ.
* ಅರಣ್ಯೀಕರಣ.

**ಸಮುದ್ರ ತೀರದ ಸವೆತಕ್ಕೆ ಕಾರಣಗಳು.:–**

* ನೈರೂತ್ಯ ಮಾನ್ಸೂನ್ ಮಾರುತಗಳು.
* ಆವರ್ತಮಾರುತಗಳು.
* ಸುನಾಮಿ.

**ಪರಿಣಾಮಗಳು:–**

* ಕರಾವಳಿಯ ಮರಗಳು ಹಾಗೂ ಕಟ್ಟಡಗಳು ಕೊಚ್ಚಿಹೋಗುತ್ತವೆ.
* ಕರಾವಳಿಯ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಧಕ್ಕೆ.
* ಪುನರ್ವಸತಿ ಸಮಸ್ಯೆ

**ನಿಯಂತ್ರಣ ಕ್ರಮಗಳು:–**

* ಸಮುದ್ರಗೋಡೆ ಮತ್ತು ತಡೆಗಟ್ಟು ನಿರ್ಮಾಣ.
* ಮರಳು ಮತ್ತು ಗಣಿಗಾರಿಕೆ ನಿಷೇದ.
* ಸಮುದ್ರ ದಢವುಳಿಸಲು ಮರಗಳನ್ನು ಬೆಳೆಸುವುದು.

**ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳು.:–**

* ಭೂಕಂಪನಾವಲಯಗಳಲ್ಲಿ ಜನವಸತಿ ನಿರ್ಮಾಣಗಳ ನಿಷೇಧ.
* ಅಂತರ್ಜಲಕ್ಕಾಗಿ ಬಾವಿಗಳ ಆಳಕೊರೆತ ನಿಷೇಧ.
* ಬೆಟ್ಟ ಗುಡ್ಡ ಪ್ರಧೇಶಗಳಲ್ಲಿ ನಗರ ಬೆಳೆವಣಿಗೆಗೆ ನಿರ್ಬಂಧ.
* ಅರಣ್ಯನಾಶ ತಡೆಗಟ್ಟುವುದು.
* ಅಣೆಕಟ್ಟು ಮತ್ತು ಜಲಾಶಯ ನಿರ್ಮಾಣಕ್ಕೆ ನಿಷೇಧ.

BLOCK EDN OFFC KRN

# ಹಣ ಮತ್ತು ಸಾಲಗಳು,

**ಆರ್.ಬಿ.ಐ.ನ ಕಾರ್ಯಗಳು:-**

* ನೋಟು ಚಲಾವಣೆಯ ಏಕಸ್ವಾಮ್ಯ.
* ಸರ್ಕಾರದ ಬ್ಯಾಂಕ್ ಆಗಿ ಕಾರ್ಯನಿರ್ವಹಣೆ.
* ಬ್ಯಾಂಕ್‌ಗಳ ಬ್ಯಾಂಕ್ ಆಗಿ ಕಾರ್ಯನಿರ್ವಹಣೆ.
* ರಾಷ್ಟ್ರೀಯ ಸಂದಾಯ ಕೇಂದ್ರವಾಗಿ ಕಾರ್ಯನಿರ್ವಹಣೆ.
* ಸಾಲಪ್ರಮಾಣದ ನಿಯಂತ್ರಕ.
* ವಿದೇಶಿ ವಿನಿಮಯದ ಸಂಗ್ರಹದ ಮೇಲ್ವಿಚಾರಕ.
* ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ.

**ಹಣದ ಅರ್ಥ ಮತ್ತು ಕಾರ್ಯಗಳು:-**

* ಸರಕುಗಳಿಗಾಗಿ ಸಂದಾಯ ಮಾಡುವಲ್ಲಿ ಅಥವಾ ಇತರೆ ವಾಣಿಜ್ಯಕ ಸಾಲಗಳನ್ನು ತೀರಿಸುವಲ್ಲಿ ವ್ಯಾಪಕವಾಗಿ ಸ್ವೀಕರಿಸಲ್ಪಟ್ಟ ಯಾವುದೇ ವಸ್ತು ಹಣವಾಗಿದೆ.

**ಕಾರ್ಯಗಳು.**

**ಪ್ರಾಥಮಿಕ ಕಾರ್ಯಗಳು:-**

* ಸರಕು ಖರೀಧಿ ಮತ್ತು ಮಾರಾಟಕ್ಕೆ ವಿನಿಮಯ ಮಾಧ್ಯಮ.
* ಸರಕು ಮತ್ತು ಸೇವೆಗಳ ಮೌಲ್ಯವನ್ನು ಹಣದ ರೂಪದಲ್ಲಿ ನಿರ್ಣಯ.
* ಸಾಲರೂಪದಲ್ಲಿ ವಿಳಂಭಿತ ಸಂದಾಯ ಮಾಡಲು ಹಣ ಸಹಾಯವಾಗಿದೆ.
* ಉಳಿತಾಯ ಮಾಡುವುದು ಮತ್ತು ಸಂಪತ್ತಿನ ಸಂಗ್ರಹ ಮಾಡುವುದು.
* ಹಣದ ಮೂಲಕ ಸರಕು ಸೇವೆಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಿ ವಿನಿಮಯ ಮಾಡಬಹುದು.

# ಬ್ಯಾಂಕ್ ವ್ಯವಹಾರಗಳು

**ಬ್ಯಾಂಕ್ ಗುಣಲಕ್ಷಣಗಳು :-**

* ಹಣದ ವಹಿವಾಟನ್ನು ಮಾಡಲಾಗುತ್ತದೆ.
* ಒಬ್ಬ ವ್ಯಕ್ತಿ /ಸಂಸ್ಥೆ/ಕಂಪನಿ ಆಗಿರಬಹುದು.
* ಸಾರ್ವಜನಿಕರಿಂದ ಠೇವಣಿ ಅಂಗೀಕಾರ.
* ಸಾಲ ನೀಡುವುದು.
* ಠೇವಣಿ ದಾರ ಮತ್ತು ಸಾಲಗಾರನ ನಡುವೆ ಕೊಂಡಿ.
* ಹೆಸರಿನೊಂದಿಗೆ ಬ್ಯಾಂಕ್ ಪದ.
* ಚೆಕ್ ಮತ್ತು ಹುಂಡಿಗಳ ಮೂಲಕ ಹಣ ಪಾವತಿ.

**ಬ್ಯಾಂಕಿನ ಕಾರ್ಯ/ಸೇವೆ/ಖಾತೆಯಿಂದಾಗುವ ಅನುಕೂಲಗಳು:-**

* ಠೇವಣಿಗಳನ್ನು ಅಂಗೀಕರಿಸುತ್ತದೆ.
* ಸಾಲ ನೀಡಲಾಗುತ್ತದೆ.
* ಹಣದ ಭದ್ರತೆ ಕಾಪಾಡುಗುತ್ತದೆ.
* ಭದ್ರತಾ ಕಪಾಟುಗಳನ್ನು ಒದಗಿಸುತ್ತದೆ.
* ಹಣದ ವರ್ಗಾವಣೆ.
* ಹುಂಡಿಗಳನ್ನು ಸೋಡಿ ಮಾಡುವುದು.
* ಜಮಾ ಕಾರ್ಡ್ ಗಳನ್ನು ನೀಡಲಾಗುವುದು.
* ಜವಬ್ದಾರಿ ಪತ್ರಗಳನ್ನು ಕೊಡುವುದು.

BLOCK EDN OFFC KRN

## ಬ್ಯಾಂಕ್ ಖಾತೆ ತೆರೆಯುವ ಹಂತಗಳು.:–

* ಬ್ಯಾಂಕ್ ಮತ್ತು ಖಾತೆಯನ್ನು ನಿರ್ಧರಿಸುವುದು.
* ಅಧಿಕಾರಿಯನ್ನು ಸಂಪರ್ಕಿಸುವುದು.
* ಪ್ರಸ್ತಾವನೆಯ ಅರ್ಜಿಯನ್ನು ತುಂಬುವುದು
* ಪರಿಚಿತರ ಉಲ್ಲೇಖ ಕೊಡುವುದು.
* ಅರ್ಜಿ ನಮೂನೆಯನ್ನು ಬ್ಯಾಂಕಿಗೆ ನೀಡುವುದು.
* ಅಧಿಕಾರಿಯ ಒಪ್ಪಿಗೆ.
* ಪ್ರಾರಂಭಿಕ ಠೇವಣಿ.

## ಉಳಿತಾಯ ಖಾತೆ:–

* ನೌಕರರು ವಿದ್ಯಾರ್ಥಿಗಳು ಮೊದಲಾದ ನಿಯಮಿತ ವ್ಯವಹಾರ ಹೊಂದುವವರು ಜನರು ಈ ಖಾತೆಯನ್ನು ತೆರೆಯುತ್ತಾರೆ
* ಈ ಖಾತೆಯು ಜನರು ಉಳಿತಾಯ ಮಾಡಲು ಸಹಾಯ ಮಾಡುತ್ತದೆ
* ಚೆಕ್ಕು ಪುಸ್ತಕ/ಹಣ ಹಿಂದಕ್ಕೆ ಸಳೆಯುವ ಚೀಟಿಯ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಿದೆ
* ಈ ಖಾತೆಯ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ.

## ಚಾಲ್ತಿ ಖಾತೆ:–

* ವ್ಯಾಪಾರಸ್ಥರು ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಗಳ ಖಾತೆಯನ್ನು ತೆರೆಯುತ್ತಾರೆ.
* ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದು.
* ಈ ಖಾತೆಯ ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ
* ಗ್ರಾಹಕರಿಂದ ಸೇವಾಶುಲ್ಕ ವಸೂಲಿ ಮಾಡುತ್ತದೆ.

BLOCK EDN OFFC KRN

# ಎರಡು ಅಂಕದ ಪ್ರಶ್ನೆಗಳು.

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು.

ಸಂಸ್ಥೆ:– ಬ್ರಹ್ಮ ಸಮಾಜ.
ವ್ಯಕ್ತಿ:– ರಾಜರಾಮ್ ಮೋಹನ್‌ರಾಯ್.
ಸುಧಾರಣೆಗಳು:– * ಏಕದೇವತಾರಾಧನೆ.
* ಅರ್ಥಹೀನ ಆಚರಣೆಗಳ ವಿರೋಧ.
* ಬಹುಪತ್ನಿತ್ವ ವಿರೋಧ.
* ವಿಧವಾ ವಿವಾಹಕ್ಕೆ ಪ್ರೋತ್ಸಾಹ.
* ಬಾಲ್ಯ ವಿವಾಹಕ್ಕೆ ವಿರೋಧ
* ಇಂಗ್ಲೀಷ್ ಶಿಕ್ಷಣಕ್ಕೆ ಒತ್ತು.

ಸಂಸ್ಥೆ:–ಆರ್ಯ ಸಮಾಜ.
ವ್ಯಕ್ತಿ:–ದಯಾನಂದ ಸರಸ್ವತಿ
ಸುಧಾರಣೆಗಳು:– * ವಿಗ್ರಹಾರಾಧನೆ, ಜಾತಿಪದ್ಧತಿ ಖಂಡನೆ.
* ಪುರೋಹಿತ ಶಾಹಿಯ ತಿರಸ್ಕಾರ
* ವಿದವಾ ವಿವಾಹ ಪ್ರೋತ್ಸಾಹ
* ಸ್ವದೇಶಿ ವಸ್ತುಗಳ ಖರೀದಿಗೆ ಕರೆ.
* ಶಾಲಾ ಕಾಲೇಜು ಸ್ಥಾಪನೆ.
* ವೇದಗಳಿಗೆ ಹಿಂತಿರುಗಿ
* ಸತ್ಯಾರ್ಥ ಪ್ರಕಾಶ
*ಶುದ್ಧಿ ಚಳುವಳಿ
ಸಂಸ್ಥೆ:– ಪ್ರಾಥನಾ ಸಮಾಜ.
ವ್ಯಕ್ತಿ:– ಆತ್ಮರಾಮ ಪಾಂಡುರಂಗ
ಸುಧಾರಣೆಗಳು:– ವಿಗ್ರಹಾರಾಧನೆ, ಜಾತಿಪದ್ಧತಿ ಮತ್ತು ಬಾಲ್ಯ ವಿವಾಹ ಖಂಡನೆ.
* ವಿದವಾ ವಿವಾಹ ಪ್ರೋತ್ಸಾಹ
* ಸ್ತ್ರೀಶಿಕ್ಷಣ, ಅಂತರಜಾತಿ ವಿವಾಹ, ಸಹಭೋಜನ ಪ್ರೋತ್ಸಾಹ.

- ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು ಹೇಗೆ ವಿವರಿಸಿ.
  * ಜನರನ್ನು ಮೊದಲು ವಿದ್ಯಾವಂತರನ್ನಾಗಿ ಮಾಡುವ ಮೂಲಕವೆ ಸುಧಾರಣೆ ಸಾಧ್ಯ.
  * ಶಾಸನ ರೂಪಿಸುವ ಸಂಸ್ಥೆಗಳಿಂದ ಸಮಾಜ ಸುಧಾರಣ ಕಾನೂನುಗಳು ಜಾರಿಯಾಗಬೇಕು.
  * ಬಡತನ ಅನಕ್ಷರತೆ ಅಜ್ಞಾನ ಮುಂತಾದ ಒಡಕುಗಳಿಂದ ಕೂಡಿದ ಭಾರತೀಯ ಸಮಾಜಕ್ಕೆ ಹೊಸ ಶೋಷಣೆ ಮುಕ್ತ ರೂಪ ನೀಡಬೇಕು.
  * ಧರ್ಮವೆಂದರೆ ಕತ್ತಲ್ಲಿರುವವರಿಗೆ ಬೆಳಕನ್ನು ನೀಡುವುದು.

- ನಾರಾಯಣ ಗುರುಗಳ ಕೊಡುಗೆಗಳು
  * ಹಿಂದುಳಿದ ಮತ್ತು ಶೋಷಣೆಗೊಳಗಾದ ಸಮುದಾಯಗಳ ಸಭಲಿಕರಣ.
  * ಮನುಷ್ಯ ಘನತೆಯಿಂದ ಬದುಕುವ ಸಮಾಜ ನಿರ್ಮಾಣ.
  * ಮಾನವ ಕುಲಕ್ಕೆ ಒಂದೇ ಜಾತಿ ಒಂದೇ ದರ್ಮ ಒಬ್ಬನೇ ದೇವರು
  * ಕೆಳಸಮುದಾಯದ ಪ್ರವೇಶ ನಿರಾಕರಿಸುತ್ತಿದ್ದ ದೇವಾಲಯಗಳಿಗೆ ಪರ್ಯಾಯ ದೇವಾಲಯಗಳ ನಿರ್ಮಾಣ.

- ಪೇರಿಯಾರ್ ಚಳುವಳಿಯ ಮುಖ್ಯಾಂಶಗಳು
  * ಇ.ವಿ. ರಾಮಸ್ವಾಮಿ ನಾಯ್ಕರ್ ಅವರ ನೇತೃತ್ವದ ಆತ್ಮಗೌರವ ಚಳುವಳಿ
  * ಆರ್ಯ ಬ್ರಾಹ್ಮಣ ಎಂಬ ಜನಾಂಗಿಯ ಶ್ರೇಷ್ಟತೆಯ ತಿರಸ್ಕಾರ.
  * ರಾಮಾಯಣದ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ ರಾಮನನ್ನು ವೈದಿಕನೆಂದು

BLOCK EDN OFFC KRN

ತಿರಸ್ಕರಿಸಿದರು.

* ಸಮಾನತೆಯ ಆಶಯ ಎತ್ತಿಹಿಡಿಯುವುದು.

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ.

- ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳೇನು?

* ಸೈನಿಕರಿಗೆ ರಾಯಲ್ ಎನ್‌ಫೀಲ್ಡ್ ಎಂಬ ಹೊಸ ಬಂದೂಕುಗಳನ್ನು ನೀಡುತ್ತಿದ್ದರು.
* ಬಂದೂಕಿನ ತೋಟಾಗಳಿಗೆ ಹಸು ಮತ್ತು ಹಂದಿಯ ಕೊಬ್ಬು ಸವರಿದ್ದಾರೆಂದು ವದಂತಿ ಹರಡಿತ್ತು
* ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಯರಿಗೆ ಹಂದಿಯು ನಿಷಿದ್ದವಾಗಿತ್ತು.
* ಬಂದೂಕು ಬಳಸಲು ಒತ್ತಾಯಿಸಿದಾಗ ಮಂಗಲ್ ಪಾಂಡೆಯು ಅಧಿಕಾರಿಯನ್ನು ಕೊಂದಿದ್ದು ತತ್ ಕ್ಷದ ಕಾರಣವಾಯಿತು.

- 1858 ಬ್ರಿಟನ್ ರಾಣಿಯ ಘೋಷಣೆಗಳೇನು?

* ಕಂಪನಿಯು ದೇಶಿಯ ರಾಜರುಗಳೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಅಂಗೀಕರಿಸಲಾಯಿತು.
* ಪ್ರಾದೇಶಿಕ ವಿಸ್ತರಣೆಯ ಅಪೇಕ್ಷಯನ್ನು ಕೈ ಬಿಡುವುದು.
* ಭಾರತೀಯರಿಗೆ ಸುಭದ್ರ ಸರ್ಕಾರವನ್ನು ನೀಡುವುದು.
* ಕಾನೂನಿನ ಮುಂದೆ ಸಮಾನತೆ, ಧಾರ್ಮಿಕ ಹಸ್ತಕ್ಷೇಪ ಮಾಡುವಂತಿಲ್ಲ.

- ಭಾರತೀಯ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅಥವ ದಂಗೆಯ ವಿಫಲತೆಗೆ ಕಾರಣಗನ್ನು ತಿಳಿಸಿ?

* ದಂಗೆಯು ಇಡೀ ಭಾರತವನ್ನು ವ್ಯಾಪಿಸಿರಲಿಲ್ಲ
* ದೇಶದ ಸ್ವಾತಂತ್ರ್ಯಕ್ಕಿಂತ ರಾಜರ/ರಾಣಿಯರ ಸ್ವಹಿತಾಸಕ್ತಿ ಹಾಗೂ ಹಕ್ಕುಗಳಿಗೆ ನಡೆದಿತ್ತು
* ಬ್ರಿಟಿಷ್ ಸೈನಿಕರಲ್ಲಿನ ಒಗಟ್ಟು ಭಾರತೀಯ ಸೈನಿಕರಲಿಲ್ಲಿ
* ಯುಧ ತಂತ್ರ. ಸೈನಿಕಪರಿಣಿತಿ, ಸೇನಾ ನಾಯಕತ್ವ ಇರಲಿಲ್ಲ
* ಹೋರಾಟದಲ್ಲಿ ನಿಶ್ಚಿತ ಗುರಿ ಇರಲಿಲ್ಲ

- ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದಾದ ಪರಿಣಾಮಗಳಾವುವು ?

* ಹಲವು ದೇಶೀ ರಾಜರು ರಾಜ್ಯಗಳನ್ನು ಕಳೆದುಕೊಳ್ಳಬೇಕಾಯಿತು,
* ಸತರ, ಜೈಪುರ ಝಾನ್ಸಿ ಉದಯಪುರ ಮೊದಲಾದ ಸಂಸ್ಥಾನಗಳನ್ನು ಬ್ರಿಟಿಷರು ವಶವಾದವು,

## ಸ್ವಾತಂತ್ರ್ಯೋತರ ಭಾರತ:–

- ನಿರಾಶ್ರಿತರ ಸಮಸ್ಯೆಯನ್ನು ದೇಶ ಹೇಗೆ ಎದುರಿಸಿತು?

* ಭಾರತ ಮತ್ತು ಪಾಕಿಸ್ತಾನದ ನಡುವೆ ಅನೇಕ ಮಿಲಿಯನ್ ಜನರು ತಮ್ಮ ಬದುಕು ಕಂಡುಕೊಳ್ಳುವ ಪ್ರಯತ್ನ ಮಾಡಿದರು
* ತಾವು ಹುಟ್ಟಿದ ಬೆಳೆದ ಸ್ಥಳ ಬಟ್ಟು ತಮ್ಮ ಧರ್ಮೀಯರು ಇರುವ ದೇಶದ ಕಡೆ ಹೊರಟರು
* ಪಶ್ಚಿಮ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಸಮಸ್ಯೆಯನ್ನು ಬಹುತೇಕ ಪರಿಹರಿಸಲಾಯ್ತು
* ನೆಹರು ಅವರ ಕಾಲದಲ್ಲೇ ಟಿಬೆಟ್ ನಂದ ಅನೇಕ ಜನರು ನಿರಾಶ್ರಿತರಾಗಿ ಬಂದರು. ಮೈಸೂರು ಸರ್ಕಾರ ಆಶ್ರಯ ನೀಡಿತು.

- ದೇಶಿಯ ಸಂಸ್ಥಾನಗಳ ವಿಲೀನೀಕರಣದಲ್ಲಿ ಸರದಾರ್ ವಲ್ಲಭಬಾಯಿ ಪಟೇಲ್ ಪಾತ್ರ ವಿವರಿಸಿ?

* ಜುನಾಘಡ್ ಹೈದರಬಾದ್ ಮತ್ತು ಜಮ್ಮುಕಾಶ್ಮಿರ ಈ ಮೂರು ಸಂಸ್ಥಾನವನ್ನು ವಿಲೀನಗೊಳಿಸಲಾಯ್ತು
* ಜಮ್ಮು ಕಾಶ್ಮಿರದ ರಾಜ ಹರಿಸಿಂಗನು ಸ್ವತಂತ್ರ ವಾಗುಳಿಯುವ ನಿರ್ಧಾರ ಮಾಡಿಸಿದರೂ ಪಾಕ್ ಪ್ರಚೋದಿತ ಪಠಾಣ ಬುಡಲಟ್ಟು ಜನಾಂಗವನ್ನು ಹೊರಗಟ್ಟಲು ಸಂದರ್ಭದ ಗಂಭೀರತೆಯಿಂದಗಿ ಭಾರತದಲ್ಲಿ ಕಾಶ್ಮಿರವನ್ನು ವಿಲೀನ ಗೊಳಿಸಲು ಸಹಿಹಾಕಿದರು, ನಂತರ ಭಾರತ ಸೇನೆ ಪಾಕ್ ಬೆಂಬಲಿತ ಪಡೆಯನ್ನು ಹಿಮ್ಮೆಟ್ಟಿಸಿತು.

- ಭಾರತವು ಸ್ವಾತಂತ್ರ್ಯಗಳಿಸಿದ ಸಮಯದಲ್ಲಿ ಸಮಸ್ಯೆಗಳಾವುವು ?

BLOCK EDN OFFC KRN

* ದೇಶಿ ಸಂಸ್ಥಾನಗಳ ವಿಲೀನೀಕರಣ ಬಹಳ ದೊಡ್ಡ ಸಮಸ್ಯೆಯಾಗಿತ್ತು.
* ತನ್ನದೇ ಹೊಸ ಸಂವಿಧಾನ ರೂಪಿಸಿಕೊಳ್ಳುವ ಸವಾಲು.
* ನೆರೆಯ ಶತ್ರುಗಳ ಉಪಟಳ.
* ಭಾರತದ ಅರ್ಥವ್ಯವಸ್ಥೆಯನ್ನು ಬಲಗೊಳಿಸುವುದು.

- ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಲಾಯಿತು?
  * ಭಾರತದ ವಿವಿದ ಭಾಗಗಳಿಂದ ಸತ್ಯಾಗ್ರಹಿಗಳು ಗೋವಾದಿಂದ ಪೋರ್ಚುಗೀಸರು ತೊಲಗಬೇಕೆಂದು ವಿಮೊಚನ ಹೋರಾಟ ನಡೆಯಿತು.
  * ನಿರಂತರ ಚಳುವಳಿ ನಡೆಯಿತು.
  * 1961 ರಲ್ಲಿ ಭಾರತದ ಸೈನ್ಯ ಮಧ್ಯೆ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.
- ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಗೊಳಿಸಿದ ರೀತಿ ವಿವರಿಸಿ.
  * ಸ್ವಾತಂತ್ರ್ಯಾನಂತರವೂ ಫ್ರೆಂಚರು ಪಾಂಡಿಚೇರಿ, ಕಾರೈಕಲ್ ಮಾಹೆ ಮತ್ತು ಚಂದ್ರನಗರಗಳ ಮೇಲೆ ಹಿಡಿತ ಹೊಂದಿದರು.
  * ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರೆ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಡದ ಫಲವಾಗಿ 1954 ರಲ್ಲಿ ಭಾರತಕ್ಕೆ ಸೇರ್ಪಡೆಗೊಂಡವು.

## ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ:–

- ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂದವ್ಯ ಅವಶ್ಯಕ ಏಕೆ?
  * ರಾಷ್ಟ್ರದ ಭದ್ರತೆಗೆ
  * ರಾಷ್ಟ್ರದ ಆರ್ಥಿಕ ಸಂವರ್ದನೆಗೆ
  * ದೇಶದ ಸಾಂಸ್ಕೃತಿಕ ಮೌಲ್ಯ ಪಸರಿಸಲು
  * ಪ್ರಸ್ತುತದ ಜಾಗತೀಕರಣ ಮತ್ತು ಆಧುನೀಕರಣದ ಅನಿವಾರ್ಯತೆಯಿಂದಾಗಿ
- ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳಾವುವು ?
  * ಜಮ್ಮು – ಕಾಶ್ಮೀರ
  * ಭಯೋತ್ಪಾದನೆ
  * ನೀರಿನ ಹಂಚಿಕೆ
- ಭಾರತ ಮತ್ತು ಚೀನಾ ನಡುವಿನ ಸಂಬಂಧವನ್ನು ವಿವರಿಸಿ ?
  * ಭಾರತದಲ್ಲಿ ಹುಟ್ಟಿದ ಬೌದ್ಧ ಧರ್ಮ ಚೀನಾದಲ್ಲಿ ಬೇರೂರಿದೆ.
  * ಭಾರತ ಮತ್ತು ಚೀನಾ ಪಂಚಶೀಲ ತತ್ವಗಳ ಮೂಲಕ ಸಂಬಂಧ ವೃದ್ಧಿಗೊಳಿಸಿಕೊಂಡಿವೆ.
  * ಟಿಬೆಟ್ ವಿವಾದದಿಂದ ಎರಡು ರಾಷ್ಟ್ರಗಳ ನಡುವೆ ಯುದ್ಧ ನಡುದು ಗಡಿ ಸಮಸ್ಯೆ ಉಲ್ಬಣವಾಗಿದೆ.
  * ಅರುಣಾಚಲ ಪ್ರದೇಶದ ವಿಚಾರಕ್ಕೆ ಎರಡು ರಾಷ್ಟ್ರಗಳ ಸಂಬಂಧ ಮತ್ತಷ್ಟು ಕಗ್ಗಂಟಾಗಿದೆ.
- ವರ್ಣಭೇದ ನೀತಿಯು ಮಾನವತಾವಾದಕ್ಕೆ ವಿರೋಧವಾದುದು ಇದನ್ನು ನಿಮ್ಮ ದೃಷ್ಟಿಕೋನದಲ್ಲಿ ಸಮರ್ಥಿಸಿ.
  * ಅಮಾನವೀಯುವದದ್ದು
  * ಮಾನವ ಹಕ್ಕುಗಳ ಉಲ್ಲಂಘನೆ
  * ಸಾಂವಿಧಾನಿಕ ವಿರೋಧವಾದದ್ದು
- ರಷ್ಯದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ ?
  * ಉತ್ತಮ ಬಾಂಧವ್ಯ.
  * 1962 ರ ಚೀನಾ ದಾಳಿಯನ್ನು ರಷ್ಯ ಖಂಡಿಸಿತ್ತು.
  * 1961 ರ ಗೋವಾ ವಿಮೋಚನೆಗೆ ಸಹಕಾರ
  * ಭಾರತ ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರದ ಬೆಳವಣಿಗೆಗೆ ಹೆಚ್ಚಿನ ನೆರವು.
  * ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸಸ್ಯತ್ವ ದೂರೆಯಬೇಕೆಂದು

BLOCK EDN OFFC KRN

ಪ್ರತಿಪಾದಿಸುತ್ತದೆ.

## ಜಾಗತಿಕ ಸಮಸ್ಯೆ ಹಾಗೂ ಭಾರತ ಪಾತ್ರ

- ಶಸ್ತ್ರಾಸ್ತ್ರಗಳ ಪೈಪೋಟಿಯಿದಾಗುವ ಪರಿಣಾಮಗಳಾವುವು?
  * ಅಣ್ವಸ್ತ್ರವನ್ನು ನಾವು ಕೊನೆಗಾಣಿಸದಿದರೆ, ಅದು ನಮ್ಮನೇ ಕೊನೆಗಾಣಿಸುತ್ತೆದೆ.
  * ವಿಶ್ವಾದ್ಯಂತ ಭಯ ಅಸ್ಥಿರತೆ, ಚಡಪಡಿಕೆ ತಲೆದೋರುತದೆ,
  * ಆರ್ಥಿಕವಾಗಿ ಅನಗತ್ಯ ನಷ್ಟದಾಯಕ.
- ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ?
  * ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ.
  * ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲೂ ಪ್ರತಿಪಾದನೆ
  * ಸಾಂವಿಧಾನಿಕ ಮೂಲಭೂತ ಹಕ್ಕುಗಳ ಪ್ರಧಾನ್ಯತೆ
  * ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ರಚನೆ.
- ಆರ್ಥಿಕ ಅಸಮಾನತೆಯ ನಿವಾರಣೆಗಾಗಿ ಭಾರತವು ಕೈಗೊಂಡ ಸುಧಾರಣಾ ಕ್ರಮಗಳಾವುವು?
  * ಯಾವುದೇ ಷರತ್ತಗಳಿಲ್ಲದೆ ಮುಂದುವರಿದ ದೇಶಗಳು ಬಡರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡಬೇಕೆಂಬ ನೀತಿ ಪ್ರತಿಪಾದನೆ.
  * ಹಿಂದುಳಿದ ರಾಷ್ಟ್ರಗಳ ಆತ್ಮಗೌರವವನ್ನು ಭಾರತ ಎತ್ತಿ ಹಿಡಿಯಲು ಸಹಕರಿಸಿದೆ.
  * ಶ್ರೀಮಂತ ರಾಷ್ಟ್ರಗಳ ಬಂಡವಾಳವು ಬಡರಾಷ್ಟ್ರಗಳಿಗೆ ಹರಿದು ಬರುವಂತೆ ಯತ್ನಸಿದೆ
- ಸಾಮಾಜಿಕ ಸಮಸ್ಯೆಗಳು ?
  * ಬಾಲ ಕಾರ್ಮಿಕ ಪದ್ಧತಿ
  * ಬಾಲ್ಯ ವಿವಾಹ
  * ಮಕ್ಕಳ ಸಾಗಾಣಿಕೆ ಮತ್ತು ಮಾರಾಟ
  * ಹಸಿವು ಮತ್ತು ಅಪೌಷ್ಟಿಕತೆ
  * ಹೆಣ್ಣು ಭ್ರೂಣಹತ್ಯೆ
  * ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ
  * ಲಿಂಗತಾರತಮ್ಯ
- ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು ?
  * ಕುಟುಂಬದ ಆರ್ಥಿಕ ಸ್ಥಿತಿ
  * ಕನಿಷ್ಠ ಕೂಲಿ
  * ಹೋಟೆಲ್, ಸಣ್ಣ ಕೈಗಾರಿಕೆ, ಪಟಾಕಿ ತಯಾರಿಕಾ ಘಟಕಗಳು
  * ಅಸಂಘಟಿತ ದುಡಿಮೆ
  * ವಲಸೆ
  * ಪೋಷಕರ ದುಶ್ಚಟಗಳು
- ಬಾಲ್ಯ ವಿವಾಹದ ಪರಿಣಾಮಗಳಾವುವು ?
  * ಬಾಲ್ಯತನ, ಶಿಕ್ಷಣ, ಮನೋರಂಜನೆ, ಅಪೌಷ್ಟಿಕತೆ,ರಕ್ತ ಹೀನತೆ ,ಅನಾರೋಗ್ಯ ಗರ್ಭಪಾತ ಶಿಶು ಮರಣ ಹಾಗೂ ತಾಯಿಯ ಮರಣ.
  * ಸಾಮಾಜಿಕ ಅಭದ್ರತೆ ದೌರ್ಜನ್ಯ ಶೋಷಣೆ
- ಬಾಲ್ಯ ವಿವಾಹಕ್ಕೆ ಪರಿಹಾರಗಳಾವುವು ?
  * 18 ವರ್ಷ ತನಕ ಶಾಲೆ ಬಿಡದಂತೆ ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನ
  * ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು.
  * ಬಾಲ್ಯವಿವಾಹ ನಡೆದರೆ ತಪ್ಪದೇ ದೂರು ನೀಡುವುದು , ಖಂಡಿಸುವುದು ಮತ್ತು ಪ್ರಶ್ನಿಸುವುದು .

BLOCK EDN OFFC KRN

## ಭಾರತದ ಮೇಲ್ಮೈ ಲಕ್ಷಣಗಳು.

- ಭಾರತದ ಪ್ರಮುಖ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿ.
  1. ಉತ್ತರದ ಪರ್ವತಗಳು.
  2. ಉತ್ತರದ ಮೈದಾನಗಳು.
  3. ಪರ್ಯಾಯ ಪ್ರಸ್ಥಭೂಮಿ.
  4. ಕರಾವಳಿ ಮೈಧಾನ ಮತ್ತು ದ್ವೀಪಗಳು.

- ಉತ್ತರದ ಪರ್ವತಗಳ ಕುರಿತು ಪ್ರಮುಖ ಶಿಖರಗಳನ್ನು ಬರೆಯಿರಿ.
  * ಮಹಾ ಹಿಮಾಲಯ:- ಮೌಂಟ್ ಎವರೆಸ್ಟ್, ಕಾಂಚನಜುಂಗ, ಮಾಕಲು, ಧೇವಕ್ತಿಗಿರಿ, ಮನಸ್ಲು, ನಂದಾದೇವಿ, ಕೆ2.
  * ಒಳ ಹಿಮಾಲಯ:- ಗಿರಿದಾಮಗಳು:- ಶಿಮ್ಲಾ, ರಾಣಿಕೇಟ್, ಮುಸ್ಸೋರಿ, ನೈನಿತಾಲ್ ಮತ್ತು ಡಾರ್ಜಲಿಂಗ್.
  * ಸಿವಾಲಿಕ್ ಬೆಟ್ಟಗಳು:-ಡೊನ್ಸ್ ಗಳು-ಡೆಹ್ರಾಡೋನ್.

- ಹಿಮಾಲಯದ ಮಹತ್ವವನ್ನು ತಿಳಿಸಿ.
  * ನೈಸರ್ಗಿಕ ಗಡಿ.
  * ಪರಕೀಯರ ಧಾಳಿಯಿಂದ ರಕ್ಷಣೆ.
  * ಮಧ್ಯ ಏಷ್ಯಾದಿಂದ ಬೀಸುವ ಶೀತಗಾಳಿಯಿಂದ ನಿಯಂತ್ರಣ.
  * ಮಳೆ ಮಾರುತಗಳನ್ನು ತಡೆದು ಅಧಿಕ ಮಳೆ.
  * ದಟ್ಟವಾದ ಅರಣ್ಯ.
  * ಖನಿಜಗಳ ಉಗ್ರಾಣ.
  * ನದಿಗಳ ಉಗಮಸ್ಥಾನ.

- ಉತ್ತರ ಮೈದಾನದ ಪ್ರಾಮುಖ್ಯತೆ ತಿಳಿಸಿ.
  * ವಿಶಾಲವಾದ ಮೈದಾನ ಫಲವತ್ತಾಗಿದೆ.
  * ಸರ್ವಕಾಲಿಕ ನದಿಗಳು ಹರಿಯುತ್ತದೆ.
  * ಕೃಷಿಗೆ ಉಪಯುಕ್ತ.
  * ಸಮತಟ್ಟಾದ ಭೂಮಿಯಿಂದ ರಸ್ತೆ, ರೈಲು ಮಾರ್ಗಗಳ ನಿರ್ಮಾಣ.
  * ಸಂಪರ್ಕ ಮಾಧ್ಯಮಕ್ಕು ಯೋಗ್ಯ.
  * ಕೈಗಾರಿಕರಣ, ನಾಗರೀಕರಣ ಮತ್ತು ವ್ಯಾಪಾರಕ್ಕೂ ನೆರವು.
  * ಯಾತ್ರ ಸ್ಥಳಗಳಿಗೆ ಪ್ರಸಿದ್ಧಿ.

- ಪರ್ಯಾಯ ಪ್ರಸ್ಥಭೂಮಿಯ ಪ್ರಾಮುಖ್ಯತೆ ತಿಳಿಸಿ.
  * ಸಮೃದ್ಧ ಖನಿಜಗಳು, ದಟ್ಟ ಕಾಡುಗಳು ಹಾಗೂ ಜೀವವೈವಿಧ್ಯತೆ.
  * ನೈರುತ್ಯ ಮಾನ್ಸೂನ್ ಮಾರುತಗಳ ಮೇಲೆ ಪ್ರಭಾವ.
  * ಕಪ್ಪು ಮಣ್ಣು ಕೃಷಿಗೆ ಪೂರಕ.
  * ದಕ್ಷಿಣ ನದಿಗಳ ಉಗಮ ಸ್ಥಾನ.
  * ಗಿರಿಧಾಮ.

- ಪಶ್ಚಿಮಘಟ್ಟ ಮತ್ತು ಪೂರ್ವ ಘಟ್ಟದ ನಡುವಿನ ವ್ಯತ್ಯಾಸ.

| ಪಶ್ಚಿಮ ಕರಾವಳಿಗೆ ಹೊಂದಿಕೊಂಡಂತೆ ಹಬ್ಬಿವೆ | ಪೂರ್ವ ಕರಾವಳಿಗೆ ಹೊಂದಿಕೊಂಡಂತೆ |
|---|---|
| ಎತ್ತರದವಾಗಿದೆ | ಎತ್ತರವಾಗಿಲ್ಲ |
| ನಿರಂತರ ಸರಣಿಗಳು | ನಿರಂತರವಾಗಿಲ್ಲ |
| ಕಣಿವೆಗಳಿಂದ ಪ್ರತ್ಯೇಕಗೊಂಡಿಲ್ಲ | ಕಣಿವೆಗಳಿಂದ ಪ್ರತ್ಯೇಕಗೊಂಡಿದೆ. |

BLOCK EDN OFFC KRN

- **ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿ ನಡುವಿನ ವ್ಯತ್ಯಾಸ.**

| | |
|---|---|
| ಪಶ್ಚಿಮ ಘಟ್ಟ ಮತ್ತು ಅರಬ್ಬಿ ಸಮುದ್ರಗಳ ನಡುವೆ ಕಂಡು ಬರುತ್ತದೆ. | ಪೂರ್ವ ಘಟ್ಟಗಳು ಮತ್ತು ಬಂಗಾಳಕೊಲ್ಲಿಗಳ ನಡುವೆ ನೆಲೆಸಿದೆ. |
| ಪೂರ್ವ ಕರಾವಳಿಗಿಂತ ಅಗಲವಾಗಿಲ್ಲ | ಪಶ್ಚಿಮ ಕರಾವಳಿಗಿಂತ ಅಗಲವಾಗಿದೆ |
| ಕೊಂಕಣ ತೀರ, ಮಲಬಾರ್ ತೀರ | ಕೋರಮಂಡಲ ತೀರ |

## ಭಾರತದ ವಾಯುಗುಣ:–

- **ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

* ಸ್ಥಾನ
* ಮೇಲ್ಮೈ ಲಕ್ಷಣಗಳು
* ಜಲರಾಶಿಗಳು
* ಮಾನ್ಸೂನ್ ಮಾರುತಗಳು

- **ಪರಿಸರಣ ಮಳೆಗಿರುವ ಸ್ಥಳೀಯ ಹೆಸರುಗಳಾವುವು?**

* ಉತ್ತರ ಪ್ರದೇಶದಲ್ಲಿ—ಆಂಧಿಸ್.
* ಪಶ್ಚಿಮ ಬಂಗಾಳದಲ್ಲಿ—ಕಾಲಬೈಸಾಕಿ.
* ಕೇರಳದಲ್ಲಿ—ಮಾವಿನಹೊಯ್ಲು.
* ಕರ್ನಾಟಕದಲ್ಲಿ—ಕಾಫಿಯ ಹೂಮಳೆ.

- **ಕಡಿಮೆ ಮಳೆ ಬೀಳುವ ಪ್ರದೇಶಗಳನ್ನು ಹೆಸರಿಸಿ.**

* ಕಛ್‌ನ ಪಶ್ಚಿಮ ಭಾಗ.
* ರಾಜಸ್ತಾನದ ಥಾರ್ ಮರುಭೂಮಿ.
* ರಾಜಸ್ತಾನದ ರೂಯ್ಲಿ ಭಾರತದ ಅತ್ಯಂತ ಶುಷ್ಕ ಪ್ರದೇಶವಾಗಿದೆ.

- **ಅಧಿಕ ಮಳೆಯಾಗುವ ಪ್ರದೇಶಗಳನ್ನು ಹೆಸರಿಸಿ.**

* ಪಶ್ಚಿಮ ಘಟ್ಟ ಪ್ರದೇಶಗಳು
* ಹಿಮಾಚಲ ಪ್ರದೇಶ
* ಈಶಾನ್ಯ ಭಾರತ
* ಮಾಸಿನ್ ರಾಮ್ ಭಾರತದಲ್ಲೇ ಅತಿಹೆಚ್ಚು ಮಳೆ ಬೀಳುವ ಪ್ರದೇಶ.

## ಭಾರತದ ಅರಣ್ಯ ಸಂಪತ್ತು

- **ಅರಣ್ಯ ನಾಶಕ್ಕೆ ಕಾರಣಗಳಾವುವು?**

* ಕೃಷಿ ಕ್ಷೇತ್ರದ ವಿಸ್ತರಣೆ.
* ರಸ್ತೆ, ರೈಲು ಮತ್ತು ನೀರಾವರಿ ಯೋಜನೆಗಳ ನಿರ್ಮಾಣ.
* ಕೈಗಾರೀಕರಣ.
* ನಗರೀಕರಣ.
* ಕಾಡ್ಗಿಚ್ಚು.

- **ಅರಣ್ಯ ಸಂರಕ್ಷಣೆಗೆ ಬೇಕಾದ ಯಾವುದಾದರೂ ನಾಲ್ಕು ಕ್ರಮಗಳನ್ನು ತಿಳಿಸಿ.**

* ಅರಣ್ಯ ನಾಶ ನಿಯಂತ್ರಣ.
* ಕಾಡ್ಗಿಚ್ಚು ನಿಯಂತ್ರಣ.
* ಮರಗಳ ಕಳ್ಳಸಾಗಣೆಗೆ ತಡೆ.
* ಅರಣ್ಯದಲ್ಲಿ ಕೀಟ ಮತ್ತು ರೋಗಗಳ ನಿಯಂತ್ರಣ.
* ಮಿತಿಮೀರಿ ಮೇಯಿಸುವುದನ್ನುತಡೆಯುವುದು.

- **ಕರ್ನಾಟಕದಲ್ಲಿರುವ ರಾಷ್ಟ್ರೀಯ ಉದ್ಯಾನವಗಳನ್ನು ಹೆಸರಿಸಿ?**

* ಬಂಡಿಪುರ.
* ಬನ್ನೇರುಘಟ್ಟ.
* ನಾಗರಹೊಳೆ.

- **ಜೀವಿ ಸಂರಕ್ಷಣೆ ವಲಯಗಳ ಪ್ರಮುಖ ಉದ್ಧೇಶಗಳನ್ನು ತಿಳಿಸಿ.**

BLOCK EDN OFFC KRN

* ಜೀವಿಗಳ ಸಂರಕ್ಷಣೆ.
* ಸಂಶೋಧನೆ ಕೈಗೊಳ್ಳುವುದು.
* ಶಿಕ್ಷಣ ಮತ್ತು ಸ್ಥಳೀಯರನ್ನು ಭಾಗಿ ಮಾಡುವುದು.

- ಭಾರತದ ಜೀವಿ ಸಂರಕ್ಷಣಾ ವಲಯಗಳನ್ನು ಹೆಸರಿಸಿ

* ನೀಲಗಿರಿ * ಕಾಂಚನಜುಂಗ
* ನಂದಾದೇವಿ * ಮಾನಸ
* ಸುಂದರ ಬನ

## ಭಾರತದ ಜಲಸಂಪನ್ಮೂಲಗಳು

- ನೀರಾವರಿ ಎಂದರೇನು? ನೀರಾವರಿಯ ವಿಧಗಳನ್ನು ತಿಳಿಸಿ?

* ಕೃಷಿ ಉದ್ದೇಶಕ್ಕೆ ಕೃತಕವಾಗಿ ನೀರು ಪೂರೈಕೆ ಮಾಡುವದನ್ನು "ನೀರಾವರಿ" ಎಂದು ಕರೆಯಲಾಗಿದೆ

- ನೀರಾವರಿಯ ವಿಧಗಳು

* ಬಾವಿ ನೀರಾವರಿ
* ಕಾಲುವೆ ನೀರವರಿ
* ಕೆರೆ ನೀರಾವರಿ

- ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ ?

* ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ನಿರಂತರ ನೀರು ಸರಬರಾಜು ಅತ್ಯಗತ್ಯ
* ಭಾರತದ ಕೃಷಿ ಮಾನ್ಸೂನ್ ಮಳೆ ಆಧಾರಿತವಾಗಿದೆ.
* ಮಳೆಯ ಹಂಚಿಕೆ ಅಕಾಲಿಕವಾಗಿದೆ.
* ಕೆಲ ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ನೀರಿನ ಪೂರೈಕೆ ಅಗತ್ಯ

- ವಿವಿದೋದ್ದೇಶ ನದಿ ಕಣಿವೆ ಯೋಜನೆಯ ಅನುಕೂಲಗಳೇನು ?

* ನೀರಾವರಿ ಪೂರೈಕೆ.
* ಪ್ರವಾಹಗಳ ನಿಯಂತ್ರಣ
* ಜಲ ವಿದ್ಯುತ್ ತಯಾರಿಕೆ
* ಮಣ್ಣಿನ ಸವೆತ ನಿಯಂತ್ರಣ
* ಒಳನಾಡಿನ ಮೀನುಗಾರಿಕೆ ಇತ್ಯಾದಿ

BLOCK EDN OFFC KRN

## ಸಾರಿಗೆ ಸಂಪರ್ಕ

- ಸಾರಿಗೆ ಸಂಪರ್ಕ ಮಾಧ್ಯಮ ಎಂದರೇನು ?

* ಸರಕು–ಸೇವೆ ಮತ್ತು ಪ್ರಯಾಣಿಕರನ್ನು ಒಂದೆಡೆ'ಯಿಂದ ಮತ್ತೊಂದೆಡೆಗೆ ಸಾಗಿಸುವುದನ್ನು ಸಾರಿಗೆ ಎನ್ನುವರು.
* ಒಬ್ಬರಿಂದ ಮತ್ತೊಬ್ಬರಿಗೆ / ಸ್ಥಳದಿಂದ ಸ್ಥಳಕ್ಕೆ ಸಮಾಚರವನ್ನು ವಿನಿಮಯ ಮಾಡಿಕೊಳ್ಳುವುದನ್ನು ಸಂಪರ್ಕ ಮಾಧ್ಯಮ ಎನ್ನುವರು.

- ಸಾರಿಗೆಯ ವಿಧಗಳನ್ನು ತಿಳಿಸಿ ?

* ಭೂ ಸಾರಿಗೆ
* ಜಲ ಸಾರಿಗೆ
* ವಾಯು ಸಾರಿಗೆ

- ಸಾರಿಗೆಯ ಮಹತ್ವವನ್ನು ವಿವರಿಸಿ ?

* ಕೃಷಿಅಬಿವೃದ್ಧಿಗೆ ನೆರವು
* ಕೈಗಾರಿಕಾ ಪ್ರಗತಿ ಉತ್ತೇಜನ

* ಉದ್ಯೋಗ ಸೃಷ್ಟಿ
* ಮಾರುಕಟ್ಟೆ ವಿಸ್ತರಣೆ
* ದೇಶಿಯ ಮತ್ತು ವಿದೇಶೀ ವ್ಯಾಪಾರದ ವೃದ್ಧಿ.

- ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆಯನ್ನು ತಿಳಿಸಿ.

* ಸ್ಥಳದಿಂದ ಸ್ಥಳಕ್ಕೆ ವಿಚಾರ ವಿನಿಮಯ
* ನೈಸರ್ಗಿಕ ವಿಪತ್ತು ಮತ್ತು ವಿನಾಶಗಳ ಮಾಹಿತಿ ತಿಳಿಯಲು

* ಹವಾಗುಣ ಮುನ್ಸೂಚನೆ ತಿಳಿಯಲು.
* ವ್ಯಾಪಾರ ವಾಣಿಜ್ಯ ಕೈಗಾರಿಕೆ ಕೃಷಿ ಅಭಿವೃದ್ದಿಗೆ ನೆರವು.

- ಪೂರ್ವತೀರ ಮತ್ತು ಪಶ್ಚಿಮ ತೀರದ ಪ್ರಮುಖ ಬಂದರುಗಳನ್ನು ಹೆಸರಿಸಿ ?

| ಪೂರ್ವತೀರ | ಪಶ್ಚಿಮತೀರ |
|---|---|
| ತೂತುಕುಡಿ | ಕಾಂಡ್ಲ |
| ಚೆನ್ನೈ | ಮುಂಬಯಿ |
| ವಿಶಾಖಪಟ್ಟಣ | ಗೋವ |
| ಪಾರಾದೀಪ್ | ಮಂಗಳೂರು |
| ಕೋಲ್ಕತ್ತಾ | ಕೊಚ್ಚಿ |

## ಅಭಿವೃದ್ಧಿ

- ತಲಾವರಮಾನವು ಅಭಿವೃದ್ಧಿಯ ನೈಜ ಮಾಪಕವಲ್ಲ ಏಕೆ?

* ಜನರ ನಡುವಿನ ವರಮಾನ ಹಂಚಿಕೆ ತೋರಿಸುವುದಿಲ್ಲ
* ಆಹಾರ, ವಸತಿ,ಶಿಕ್ಷಣ, ಆರೋಗ್ಯದ ಮಾಪನ ತೋರುವುದಿಲ್ಲ.
* ಸಾಮಾಜಿಕ ಆಂಶಗಳ ಲಭ್ಯತೆ ಪರಿಗಣಿಸುವುದಿಲ್ಲ.

- ಅಭಿವೃದ್ದಿಯು ಒಂದು ಪ್ರಕ್ರಿಯೆ ವಿವರಿಸಿ.

* ಉತ್ಪಾದನಾಂಗಗಳ ಪೂರೈಕೆ ಮತ್ತು ಸರಕು ಸೇವೆಗಳ ಬೇಡಿಕೆಯಲ್ಲಿನ ಬದಲಾವಣೆಗಳನ್ನು ಸೂಚಿಸುತ್ತದೆ.
* ಉತ್ಪಾದನಾಂಗಗಳ ಪೂರೈಕೆಯು ಶಿಕ್ಷಣ, ಬಂಡವಾಳ.
* ಜನಸಂಖ್ಯೆ ಮತ್ತು ತಾಂತ್ರಿಕತೆಯಿಂದ ಬದಲಾಗುತ್ತದೆ.

- ಭಾರತದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಕಡಿಮೆ ಇರುವುದಕ್ಕೆ ಕಾರಣ ನೀಡಿರಿ.

* ಆಹಾರದ ಕೊರತೆ.
* ವಸತಿಯ ಕೊರತೆ.
* ಬಟ್ಟೆಯ ಕೊರತೆ.
* ಶಿಕ್ಷಣದ ಕೊರತೆ.
* ಆರೋಗ್ಯದ ಕೊರತೆ.

- ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಸಮರ್ಥಿಸಿ.

* ಮಹಿಳಾ ಸ್ವಸಹಾಯ ಸಂಘಗಳು ಅಲ್ಪ ಪ್ರಮಾಣದ ಸಂಪನ್ಮೂಲಗಳನ್ನು ಕ್ರೋಡಿಕರಿಸಿ ಬಾಹ್ಯ ಸಹಾಯವನ್ನು ಪಡೆದು ವ್ಯವಹಾರ ಅರಂಭಿಸಿ ವರಮಾನ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತವೆ.
* ವರಮಾನ ಸೃಷ್ಟಿಸುವಂತಹ ಉದ್ಯೋಗಗಳ ಕುರಿತು ತರಬೇತಿ ನೀಡಲಾಗುತ್ತದೆ.
* ಮಹಿಳೆಯರ ವರಮಾನ ಹಾಗೂ ಉಳಿತಾಯ ವೃದ್ಧಿಗೆ ಪ್ರೋತ್ಸಾಹ.
* ಮಹಿಳೆಯರ ಘನತೆ ಹಾಗೂ ಸ್ವಾಯತ್ತತೆ ಹೆಚ್ಚಳ.

- ಮಾನವ ಅಭಿವೃದ್ಧಿ ಸೂಚ್ಯಾಂಕ ಎಂದರೇನು? ಅದನ್ನು ಹೇಗೆ ಲೆಕ್ಕ ಹಾಕುತ್ತಾರೆ?

* ಜೀವಿತಾವಧಿ, ಸಾಕ್ಷರತೆ ಮತ್ತು ತಲಾವರಮಾನದ ಸರಾಸರಿಯೆ ಮಾನವ ಅಭಿವೃದ್ದಿಯ

BLOCK EDN OFFC KRN

ಸೂಚ್ಯಾಂಕ.
* ಆರೋಗ್ಯವನ್ನು ವ್ಯಕ್ತಿಗಳ ಜೀವಿತಾವಧಿಯಿಂದ.
* ಶಿಕ್ಷಣವನ್ನು ಸಾಕ್ಷರತೆಯ ಪ್ರಮಾಣದಿಂದ.
* ಖರೀದಿ ಶಕ್ತಿಯನ್ನು ತಲಾವರಮಾನ ಬಳಸಿ ಅಳೆಯಲಾಗುತ್ತದೆ.

## ಗ್ರಾಹಕ ಶಿಕ್ಷಣ ಮತ್ತು ರಕ್ಷಣೆ

- ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳನ್ನು ತಿಳಿಸಿ ?
  * ಸುರಕ್ಷತೆ ಮತ್ತು ಗುಣಮಟ್ಟಕ್ಕೆ ಮೊದಲ ಆದ್ಯತೆ.
  * ಅಲತೆ, ತೂಕ, ಬೆಲೆ ಮೇಲೆ ನಿಗಾ
  * ತೊಂದರೆಗೆ ಒಳಗಾದ ಬಳಕೆದಾರರಿಗೆ ಸೂಕ್ತ ಪರಿಹಾರ
- ಗ್ರಾಹಕ ಶಿಕ್ಷಣ ಜಾಗೃತಿ

  ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು ?
  * ದೂರುಗಳು ಕೈಬರಹ/ ಬೆರಳಚ್ಚಿನಲ್ಲಿರಬೇಕು
  * ದೂರುದಾರನ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ನಮೂದಿಸಿರಬೇಕು
  * ಮೋಸವಾದ ವಸ್ತುವಿನ ಹೆಸರು ಸ್ಪಷ್ಟವಾಗಿ ನಮೂದಾಗಿರಬೇಕು
  * ಗ್ರಾಹಕನೇ ಅಧ್ಯಕ್ಷರ ಮುಂದೆ ವಾದಿಸಬಹುದು. ವಕೀಲರ ಅಗತ್ಯವಿಲ್ಲ.
- ಗ್ರಾಹಕರ ಹಕ್ಕುಗಳೇನು ತಿಳಿಸಿ ?
  * ಜೀವನಕ್ಕೆ ಅಪಾಯಕಾರಿಯನಿಸಿದ ಸರಕುಗಳ ವಿಕ್ರಯದ ವಿರುದ್ಧ ರಕ್ಷಣೆಯ ಹಕ್ಕು
  * ಮಾಹಿತಿ ಪಡೆಯುವ ಹಕ್ಕು
  * ವಸ್ತುಗಳ ಆಯ್ಕೆಯ ಹಕ್ಕು
  * ಗ್ರಾಹಕ ಶಿಕ್ಷಣ ಹಕ್ಕು
- ಗ್ರಾಹಕ ಆಂದೋಲನದ ಮೂಲ ಆಶಯ ಯಾವುದು?
  * ನಿರಂತರ ಶೋಷಣೆಯಿಂದ ಗ್ರಾಹಕರ ರಕ್ಷಣೆ.
- ಗ್ರಾಹಕರ ಅನುಭವಿಸುತ್ತಿರುವ ಸಂಕಷ್ಟಗಳೇನು?
  * ಪದಾರ್ಥಗಳಿಗೆ ಅಧಿಕ ಬೆಲೆ.
  * ತೂಕ ಮತ್ತು ಅಳತೆಗಳಲ್ಲಿ ಮೋಸ.
  * ಕಲಬೆರೆಕೆ ವಸ್ತುಗಳ ಮಾರಾಟ.
  * ಅಕ್ರಮ ದಾಸ್ತಾನು.

BLOCK EDN OFFC KRN


ಚಿತ್ರದುರ್ಗ ಜಿಲ್ಲಾ ಸಮಾಜವಿಜ್ಞಾನ ಶಿಕ್ಷಕರ ಕ್ಲಬ್ ಚಿತ್ರದುರ್ಗ
ಭಾರತ
ನದಿಗಳು ಮತ್ತು
ವಿವಿಧೋದ್ದೇಶ ಕಣಿವೆಯೋಜನೆಗಳು

## INDIA OUTLINE
(PHYSICAL)




BLOCK ED




BLOCK ED


INDIA
Major Sea Ports and
International Airports
N
PAKISTAN
CHINA
NEPAL
BHUTAN
BANGLADESH
MYANMAR
Amritsar
(Raja Sansi)
Delhi
(Indira Gandhi International)
Kandla
Tropic of Cancer
Kolkata
(Netaji Subhash Chandra Bose)
Haldia
Paradip
Mumbai
(Chatrapati Shivaji)
(Jawahar Lal Nehru)
Hyderabad
Vishakhapatnam
Arabian
Sea
Bay
of
Bengal
Marmagao
Chennai
(Meenambakkam)
New Mangalore
Kavaratti
Kochi
Tiruvanantapuram
(Nedimbacherry)
Tuticorin
Indian Ocean
Port Blair
Andaman & Nicobar Islands
(INDIA)
LEGEND
International Boundary
State Boundary
Sea Ports
Airports
Map not to Scale
Copyright © 2010 www.mapsofindia.com
(Updated on 20th Jan. 2010)
www.mapsofindia.com






1) Tropic of cancer (23 ½ north latitude )
2) 82 ½ east longitude
3) Indira point ( pigmo lina point
4) Aravali mountains
5) Mt. Abu (Mt good shikar)
6) Western mountains
7) Neelgiris
8) Vindhya mountains
9) Satpura range
10) Mikal range
11) Thar desert
12) Konkan coast
13) Malbar coast
14) Coramandal coast
15) Utkal coast
16) Chirapungi/Mausinram
17) Ganganagar
18) Alahabad

## ಕಾರ್ಯ ನಿರ್ವಹಿಸಿದ ತಂಡ

ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮಾರ್ಗದರ್ಶನದಲ್ಲಿ

ಶ್ರೀಮತಿ ವತ್ಸಲ ಎಸ್ ಕೆ
ಉಪಪ್ರಾಂಶುಪಾಲರು ಜಿ ಜೆ ಸಿ ಸಾಲಿಗ್ರಾಮ

ಶ್ರೀ ಮತಿ ಸುಜಾತ ಕೆ ಎಸ್
ಮುಖ್ಯ ಶಿಕ್ಷಕರು ಜಿ ಹೆಚ್ ಎಸ್ ತಿಪ್ಪೂರು

ಶ್ರೀ ಉದಯ್ ಕುಮಾರ್ ಸ ಶಿ
ಜಿ ಹೆಚ್ ಎಸ್ ಚುಂಚನಕಟ್ಟೆ
ಶ್ರೀ ರಮೇಶ್
ಮುಖ್ಯ ಶಿಕ್ಷಕರು ಲಯನ್ಸ್ ವಿದ್ಯಾ ಸಂಸ್ಥೆ

ಶ್ರೀ ವಿಠಲ್ ಸ ಶಿ
ಜಿ ಹೆಚ್ ಎಸ್ ಹನಸೋಗೆ

ಶ್ರೀ ಗೋವಿಂದನಾಯಕ ಸ ಶಿ
ಶ್ರೀ ಬಾಲಜಗತ್ ಚುಂಚನಕಟ್ಟೆ

# ಧನ್ಯವಾದಗಳು

BLOCK EDN OFFC KRN